ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 ಸಂಚಿಕೆ 13 ಮಾರ್ಚ್ 30, 1980 40 ಪೈಸೆ

ತ್ರಿಪುರಾದಲ್ಲಿ ಕಾಂಗ್ರೆಸ್ (ಐ) ನಿಂದ ಶಾಂತಿಗೆ ಭಂಗ

ಅಸ್ಸಾಂ ದಂಗೆಯಿಂದ ಉಂಟಾದ ಪರಿಸ್ಥಿತಿ, ಏರುತ್ತಿರುವ ಬೆಲೆಗಳು ಮತ್ತು ಒಂಬತ್ತು ರಾಜ್ಯಗಳ ವಿಧಾನ ಸಭೆಗಳನ್ನು ಕೇಂದ್ರವು ಅಪ್ರಜಾಸತ್ತಾತ್ಮಕವಾಗಿ ವಿಸರ್ಜಿಸಿದ್ದು ಇವುಗಳ ಬಗ್ಗೆ ಜನತೆಯ ತೀವ್ರ ಕಾಳಜಿಯನ್ನು ನಿರೂಪಿಸಲು ವಾಮರಂಗ ಪಕ್ಷಗಳಾದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಫಾರ್ವರ್ಡ್ ಬ್ಲಾಕ್ ಮತ್ತು ಆರ್. ಎಸ್. ಪಿ. ಗಳು ಅಗರ್ತಲಾದಲ್ಲಿ ಒಂದು ಭಾರಿ ಸಾಮೂಹಿಕ ರ್‍ಯಾಲಿಯನ್ನು ಸೇರಿಸಿದ್ದವು.

ಮುಖ್ಯಮಂತ್ರಿ ನೃಪೇನ್ ಚಕ್ರವರ್ತಿಯವರು ಕಾಂಗ್ರೆಸ್ (ಐ) ನಾಯಕರಿಂದ ಪ್ರಜಾಪ್ರಭುತ್ವಕ್ಕೆ ಒದಗುತ್ತಿರುವ ಬೆದರಿಕೆಯನ್ನು ವಿವರಿಸಿದರು. ಸರ್ವಾಧಿಕಾರ ಶಕ್ತಿಗಳನ್ನು ಎದುರಿಸಲು ವಿಶಾಲ ಪ್ರಜಾಪ್ರಭುತ್ವವಾದಿ ರಂಗವನ್ನು ರೂಪಿಸಲು ಅವರು ಕರೆಕೊಟ್ಟರು. ಆರ್. ಎಸ್. ಪಿ. ಯ ಸುದರ್ಶನ್ ಭಟ್ಟಾಚಾರ್ಯ, ಫಾರ್ವರ್ಡ್ ಬ್ಲಾಕ್ ನಿಶಿತ್‌ದಾಸ್, ಸಿ. ಪಿ. ಐ.ನ ಜುನುದಾಸ್ ಅವರು ಎಡ ಮತ್ತು ಪ್ರಜಾಪ್ರಭುತ್ವವಾದಿ ಐಕ್ಯತೆಯ ಅಗತ್ಯವನ್ನು ಒತ್ತಿ ಹೇಳಿದರು.

ವಾಮರಂಗ ಸರ್ಕಾರದ ರಚನೆಯಾದ ನಂತರ ತ್ರಿಪುರಾದ ಆರ್ಥಿಕತೆ ಸುಧಾರಿಸುತ್ತಿದೆ. ಆದರೆ ಜನತೆಗೆ ಸಹಾಯ ಮಾಡುವ ಸರ್ಕಾರದ ಪ್ರಯತ್ನಗಳನ್ನು ಹಿಂಸೆಯಿಂದ ಕೆಲವು ಅಂಥ ಸಂಘಟನೆಗಳಾದ ಅಮ್ರ ಬಂಗಾಲಿ ಮತ್ತು ತ್ರಿಪುರಾ ಉಪಜಾತಿ ಯುವಸಮಿತಿಗಳು ಮುಂತಾದುವು ತಡೆಯುತ್ತಿವೆ.

ಹಿಂದಿನ ವಿಧಾನಸಭಾ ಸದಸ್ಯರಾದ ಕಾಂಗ್ರೆಸ್ (ಐ)ನ ಚಂದ್ರಶೇಖರ ದತ್ತ ಲೋಕಸಭೆ ಚುನಾವಣೆಗೆ ಮುಂಚೆ ಮಹಿಳೆಯರ ಪ್ರದರ್ಶನದ ಮೇಲೆ ಹಲ್ಲೆ ನಡೆಸಿದ್ದರು. ಈಗ ತಮ್ಮ ನೂರಾರು ಹಿಂಬಾಲಕರೊಡನೆ ಬಿಲೋನಿಯ ಸಬ್‌ಡಿವಿಜನಲ್ ಕಚೇರಿಯ ಮೇಲೆ ದಾಳಿ ನಡೆಸಿ, ಕಚೇರಿಯ ಫೈಲುಗಳು, ಕಾಗದಗಳನ್ನು ನಾಶ ಪಡಿಸಿದ್ದಾರೆ.

ವಿಧಾನಸಭೆಯಲ್ಲಿ ಕಾಂಗ್ರೆಸ್ (ಐ) ಸದಸ್ಯರೇ ಇಲ್ಲ, ವಿರೋಧ ಪಕ್ಷದ ಸದಸ್ಯ ಸಂಖ್ಯೆ ನಾಲ್ಕೇ ಇರುವುದು. ಆದ್ದರಿಂದ ಪಕ್ಷಾಂತರದ ಮೂಲಕ ಸರ್ಕಾರವನ್ನು ಉರುಳಿಸಲಾರದ ಕಾಂಗ್ರೆಸ್ (ಐ), "ಕಾನೂನು ಮತ್ತು ಶಿಸ್ತು" ಸಮಸ್ಯೆಯನ್ನು ಬಿಲೋನಿಯ ಘಟನೆ ಮುಂತಾದುವುಗಳ ಮೂಲಕ ಸೃಷ್ಟಿಸುತ್ತಿದೆ. ತ್ರಿಪುರಾಬಂದ್‌ಗೆ ಕಾಂಗ್ರೆಸ್ (ಐ) ಬೆಂಬಲಕೊಟ್ಟಿತ್ತು, ಆದರೆ ಅದು ಪೂರ್ಣವಾಗಿ ಸೋತಿತು.

ಇಂಥ ಚಟುವಟಿಕೆಗಳಿಂದ ಕಾಂಗ್ರೆಸ್ (ಐ) ಜನರಿಂದ ಮತ್ತಷ್ಟು ದೂರ ಸರಿಯುತ್ತಿದೆ. ●

'ಸಂಯುಕ್ತ ಕರ್ನಾಟಕ' ಪುನರಾರಂಭವಾಗಲಿ

ಸಂಯುಕ್ತ ಕರ್ನಾಟಕ ಪತ್ರಿಕೆಯು ಕರ್ನಾಟಕ ರಾಜ್ಯದ ಹಿರಿಯ ಪತ್ರಿಕೆಗಳಲ್ಲೊಂದಾಗಿದೆ. ದೇಶದ ಸ್ವಾತಂತ್ರ್ಯ ಚಳುವಳಿಯಲ್ಲೂ, ಕರ್ನಾಟಕ ಏಕೀಕರಣ ಹೋರಾಟದಲ್ಲೂ ಅದು ಮಹತ್ವದ ಪಾತ್ರವನ್ನು ವಹಿಸಿತ್ತು ಮತ್ತು ಅದರಿಂದ ಪತ್ರಿಕೆಯು ಬೆಳೆದು ಬಂತು. ಮೊದಲು ಹುಬ್ಬಳ್ಳಿಯಲ್ಲಿ ಪ್ರಕಟವಾಗುತ್ತಿದ್ದ ಈ ಪತ್ರಿಕೆಯ ಇನ್ನೊಂದು ಆವೃತ್ತಿಯನ್ನು ಕರ್ನಾಟಕ ಏಕೀಕರಣವಾದ ನಂತರ ಬೆಂಗಳೂರಲ್ಲಿ ಪ್ರಾರಂಭ ಮಾಡಲಾಯಿತು. ಈ ಪತ್ರಿಕೆಯನ್ನು ಶ್ರೀ ಆರ್. ಆರ್. ದಿವಾಕರ್ ಅವರು ಲೋಕ ಶಿಕ್ಷಣ ಸಂಸ್ಥೆಯ ಪರವಾಗಿ ನಡೆಸುತ್ತಿದ್ದರು.

ಕೆಲವು ವರ್ಷಗಳ ಹಿಂದೆ ಆ ಪತ್ರಿಕೆಯನ್ನು ರಾಜ್ಯದ ಮಾಜಿ ಅರ್ಥಸಚಿವರಾಗಿದ್ದ ಎಂ. ವೈ. ಘೋರ್ಪಡೆಯವರು ಕೊಂಡುಕೊಂಡರು. ಎರಡು ವರ್ಷದ ಹಿಂದೆ ಅವರು ಅದನ್ನು ಶ್ರೀ ಬಸವರಾಜು ಎಂಬ ಪ್ರಸಿದ್ಧ ಎಕ್ಸೈಸ್ ಕಂಟ್ರಾಕ್ಟ್‌ದಾರರೂ, ಕೈಗಾರಿಕೋದ್ಯಮಿಗಳೂ ಮತ್ತು ರಾಜಕಾರಣಿಗೂ ಮಾರಾಟಮಾಡಿದರು. ಲೋಕ ಶಿಕ್ಷಣ ಸಂಸ್ಥೆಯ ಈ ವರ್ಗಾವಣೆಗಳನ್ನು ಪ್ರಶ್ನಿಸಿ ನ್ಯಾಯಾಲಯದ ಮುಂದೆ ಕೇಸು ಸಹ ನಡೆಯುತ್ತಿದೆ.

ಪತ್ರಿಕೆಯ ಮಾಲೀಕರಾದ ಶ್ರೀ ಬಸವರಾಜ್‌ರವರು ಅರಸು ಕಾಂಗ್ರೆಸ್ಸಿನ ಅಭ್ಯರ್ಥಿಯಾಗಿ ಲೋಕಸಭಾ ಚುನಾವಣೆಗೂ ನಿಂತಿದ್ದು ಸೋತರು.

ಸಂಪಾದಕೀಯ

ಅವರ ಪಕ್ಷವೂ ಸೋಲನ್ನನುಭವಿಸಿತು. ಈ ಹಿನ್ನೆಲೆಯಲ್ಲಿ ಅವರು ನಗರದ ಆವೃತ್ತಿಯಿಂದ ನಷ್ಟವಾಗುತ್ತಿದೆಂಬ ನೆಪಹೂಡಿ ಪತ್ರಿಕೆಯನ್ನು ಜನವರಿ 31ರಂದು ಮಧ್ಯ ರಾತ್ರಿಯಿಂದ ಏಕಾಏಕಿಯಾಗಿ ಮುನ್ಸೂಚನೆಯಿಲ್ಲದೆ ಮುಚ್ಚಿದರು. ಮರುದಿನದಿಂದ ಅಲ್ಲಿ ಬೀಗಮುದ್ರೆ ಬಿದ್ದಿದೆ. ಮಾಲೀಕರ ಈ ವರ್ತನೆಯು ತೀರಾ ಅನ್ಯಾಯವಾದುದಾಗಿದೆ.

ಇದರ ಪರಿಣಾಮವಾಗಿ ಸುಮಾರು 230 ನೌಕರರಿಗೆ ಕೆಲಸವಿಲ್ಲದಂತಾಗಿದೆ. ಮಾಲೀಕರ ವರ್ತನೆಯನ್ನು ಪ್ರತಿಭಟಿಸಿ ಎಲ್ಲ ನೌಕರರೂ ಕಚೇರಿಯ ಮುಂದೆ ಸತ್ಯಾಗ್ರಹ ನಡೆಸಿದರು. ನಂತರ ಈಗ ಒಂದು ತಿಂಗಳಿಂದ ವಿಧಾನಸೌಧದ ಮುಂದೆ ಸರದಿ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದಾರೆ.

ಈ ಹೋರಾಟಕ್ಕೆ ಎಲ್ಲ ಸಂಘಸಂಸ್ಥೆಗಳೂ, ರಾಜಕೀಯ ಪಕ್ಷಗಳೂ ಬೆಂಬಲ ನೀಡಿವೆ. ಮುಖ್ಯಮಂತ್ರಿಗಳೂ ಸಹಾನುಭೂತಿ ವ್ಯಕ್ತಪಡಿಸಿದ್ದಾರೆ, ಕಾರ್ಮಿಕ ಮಂತ್ರಿಯವರು ಒಂದು ಬಾರಿ ಮಾತುಕತೆಯನ್ನು ಸಹ ನಡೆಸಿದರು. ಆದರೆ ಸಮಸ್ಯೆ ಇನ್ನೂ ಬಗೆಹರಿದಿಲ್ಲ. ಪತ್ರಿಕೆಯ ನೌಕರರ ಪರಿಸ್ಥಿತಿ ತುಂಬಾ ಶೋಚನೀಯವಾಗಿದೆ.

[ಕಡೆಯ ಪುಟ ನೋಡಿ]

ಜನತೆಯನ್ನು ಹೋರಾಟಕ್ಕೆ ಅಣಿಗೊಳಿಸಲು ಕೇಂದ್ರಸಮಿತಿ ಕರೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯು ಮಾರ್ಚಿ 14, 15 ಮತ್ತು 16 ರಂದು ನವದೆಹಲಿಯಲ್ಲಿ ಸಭೆ ಸೇರಿ ಸದ್ಯದ ರಾಜಕೀಯ ಸನ್ನಿವೇಶವನ್ನು ಕುರಿತು ಚರ್ಚಿಸಿತು. ಮತ್ತೆ ತಲೆಯೆತ್ತಿರುವ ಅಧಿಕಾರಶಾಹಿಯ ವಿರುದ್ಧ ನಡೆಸುವ ಹೋರಾಟದ ಮುಂದುವರಿಕೆಯಾಗಿ, ಬರುವ ಒಂಬತ್ತು ರಾಜ್ಯಗಳ ವಿಧಾನ ಸಭೆ ಚುನಾವಣೆಗಳನ್ನು ಗ್ರಹಿಸಬೇಕೆಂದು ಕೇಂದ್ರ ಸಮಿತಿ ಅಭಿಪ್ರಾಯ ಪಟ್ಟಿತು.

ಒಂಬತ್ತು ರಾಜ್ಯಗಳ ವಿಧಾನಸಭೆಗಳ ವಿಸರ್ಜನೆ ಮತ್ತು ಅಧ್ಯಕ್ಷರ ಆಳ್ವಿಕೆಯನ್ನು ಆದಕ್ಕೆ ತಂದಿರುವುದು, ಇವೆಲ್ಲವೂ ಕೇಂದ್ರದಲ್ಲಿ ಮಾತ್ರವಲ್ಲದೆ ರಾಜ್ಯಗಳಲ್ಲೂ ಏಕಪಕ್ಷ ಸರ್ವಾಧಿಕಾರವನ್ನು ಸ್ಥಾಪಿಸುವ ಕ್ರಮದ ಭಾಗವಾಗಿದೆ. ಪ. ಬಂಗಾಳ, ತ್ರಿಪುರಾ ಮತ್ತು ಕೇರಳ ಸರ್ಕಾರಗಳ ವಿರುದ್ಧ ಕಾಂಗ್ರೆಸ್ (ಐ) ನಡೆಸಿರುವ ಪೂರ್ವಸಿದ್ಧ ಅಪಪ್ರಚಾರ ಮತ್ತು ಕೇಂದ್ರ ಸರ್ಕಾರವು ಮತ್ತಷ್ಟು ಅಧಿಕಾರಗಳನ್ನು ಕೇಂದ್ರೀಕರಿಸಿಕೊಂಡಿರುವುದು, ಇವುಗಳ ಜೊತೆಯಲ್ಲಿಯೇ ಇದನ್ನು ಗಮನಿಸಬೇಕಾಗಿದೆ.

ಪ್ರತಿಘೋರಣೆ ಮತ್ತು ಅಸಹನೆ:

ಕೇಂದ್ರದ ಸಚಿವರು ನೀಡುತ್ತಿರುವ ಸಾರ್ವಜನಿಕ ಹೇಳಿಕೆಗಳು ಮತ್ತು ಬೆದರಿಕೆಗಳು. ಪ್ರಧಾನಮಂತ್ರಿಗಳೂ ಸೇರಿದಂತೆ ಕೆಲವು ಸಚಿವರು ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಬರೆದಿರುವ ಪತ್ರಗಳು, ಇವೆಲ್ಲವೂ ಕಾಂಗ್ರೆಸ್ (ಐ) ಅಲ್ಲದ ಸರ್ಕಾರಗಳ ಬಗ್ಗೆ ಪ್ರತಿಪಕ್ಷ ಧೋರಣೆಯನ್ನು ತೋರಿಸುವುದರ ಬಗ್ಗೆ ಕೇಂದ್ರ ಸಮಿತಿ ಕಾಳಜಿ ವ್ಯಕ್ತಪಡಿಸಿತು. ಕೇಂದ್ರ ಸಚಿವರ ಈ ಅಧಿಕೃತ ಹೇಳಿಕೆಗಳು ಮತ್ತು ಮೂರು ರಾಜ್ಯಗಳಲ್ಲಿ ಕಾಂಗ್ರೆಸ್(ಐ) ನಡೆಸುತ್ತಿರುವ ಅಪಪ್ರಚಾರ, ಇವೆಲ್ಲವೂ ಕಾಂಗ್ರೆಸ್(ಐ). ತನ್ನ ಪಕ್ಷದ್ದಲ್ಲದ ಸರ್ಕಾರಗಳ ಬಗ್ಗೆ ಅಸಹನೆಯನ್ನು ತಾಳಿರುವುದರ ದ್ಯೋತಕವಾಗಿದ್ದು, ಇದು ಒಂಬತ್ತು ರಾಜ್ಯಗಳ ವಿಸರ್ಜನೆ, ಹರ್‍ಯಾಣ, ಹಿಮಾಚಲ ಪ್ರದೇಶ ಮತ್ತು ಕರ್ನಾಟಕಗಳಲ್ಲಿನ ಸಾಮೂಹಿಕ ಪಕ್ಷಾಂತರ ಇವುಗಳ ಮೂಲಕ ವ್ಯಕ್ತವಾಗಿದೆ ಎಂದು ಕೇಂದ್ರ ಸಮಿತಿ ಹೇಳಿತು.

ರಾಜ್ಯ ಸರ್ಕಾರಕ್ಕೆ ಸಂಬಂಧಿಸಿದ ವಿಚಾರವಾದ ಕಾನೂನು ಮತ್ತು ಶಿಸ್ತನ್ನು ಜಂಟಿಪಟ್ಟಿಯೊಳಗೆ ತರಬೇಕೆನ್ನುವ ಬೇಡಿಕೆ, ರಾಜ್ಯ ಸರ್ಕಾರಗಳು ಮತ್ತು ಅವುಗಳನ್ನು ನಡೆಸುತ್ತಿರುವ ವಿವಿಧ ರಾಜಕೀಯ ಪಕ್ಷಗಳು ತಮ್ಮ ಮತದಾರರಿಗೆ ಇತ್ತಿರುವ ಭರವಸೆಗಳು ಮತ್ತು ಪ್ರತಿಜ್ಞೆಗಳನ್ನು ಮೀರಿ ಕೇಂದ್ರದ ನೀತಿಗಳು ಕಾರ್ಯಕ್ರಮಗಳನ್ನು ಅನುಸರಿಸಬೇಕೆಂಬ ಒತ್ತಾಯ, ಕೇಂದ್ರದ ಆದೇಶಗಳ ಪ್ರಕಾರ ಸ್ಥಾನಬದ್ಧತಾ ಕಾಯಿದೆಯನ್ನು ಒಪ್ಪಿಕೊಂಡು ಜಾರಿಗೆ ತರಬೇಕು ಎನ್ನುವ ಒತ್ತಡ, ಇವೆಲ್ಲವೂ ಕಾಂಗ್ರೆಸ್ (ಐ) ನಾಯಕರು ರಾಜ್ಯಗಳ ಸ್ವಾಯತ್ತತೆ ಮತ್ತು ಭಾರತದ ಸಂವಿಧಾನದ ಒಕ್ಕೂಟ ಅವಕಾಶಗಳ ವಿರುದ್ಧವಾಗಿ ನಡೆಸಿರುವ ಕ್ರಮವನ್ನು ಪ್ರದರ್ಶಿಸುತ್ತದೆ. ಭಾರತೀಯ ಒಕ್ಕೂಟದ ಐಕ್ಯತೆಯನ್ನು ಬಯಸುವವರೆಲ್ಲರೂ, ರಾಜ್ಯಗಳ ಈ ನ್ಯಾಯಬದ್ಧ ಹಕ್ಕನ್ನು ಎತ್ತಿಹಿಡಿಯಲು ತಮ್ಮ ದನಿಯೆತ್ತಬೇಕೆಂದು ಕೇಂದ್ರ ಸಮಿತಿ ಕರೆಕೊಡುತ್ತದೆ.

ಅನಾರೋಗ್ಯಕರ ಕ್ರಮ:

ಇಡೀ ಕುರ್ತಪರಿಸ್ಥಿತಿಯ ಚೌಕಟ್ಟಿನ ಪುನರ್‌ಸ್ಥಾಪನೆ, ಈ ಚೌಕಟ್ಟಿನ ಖ್ಯಾತ ಅಂಶಗಳಿಗೆ ಉನ್ನತ ಅಧಿಕಾರ ನೀಡಿಕೆ, ತಮ್ಮ ಕರ್ತವ್ಯವನ್ನು ಪಾಲಿಸುತ್ತಿರುವ ಅಧಿಕಾರಿಗಳಿಗೆ ಶಿಕ್ಷೆ, ಚುನಾವಣಾ ಕಮಿಷನ್ನಿನ ಮೇಲೆ ತರುತ್ತಿರುವ ಒತ್ತಡ, ಮತ್ತು ಕಷ್ಟಕರವಾಗುವ ರಾಜ್ಯಗಳಲ್ಲಿ ತಮ್ಮ ನಂಬಿಕಸ್ಥರನ್ನು ಇಡಲು ಈಗಿರುವ ರಾಜ್ಯಪಾಲ

[ಕಡೆಯ ಪುಟ ನೋಡಿ]

ಕೇರಳ : ಹೊಸ ಸರಕಾರ ಅಸ್ತಿತ್ವಕ್ಕೆ ಬಂದ ಮೇಲೆ

ಕೇರಳದ ಹೊಸ ಸರಕಾರದ ನೇತೃತ್ವವು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೈಯಲ್ಲಿರುವುದು ಕೇರಳದ ಜನತೆಗೆ ಅಪಾರ ಸಂತೋಷವುಂಟುಮಾಡಿದೆ. ಆದರೆ, ಇದರೊಂದಿಗೆ, 1957ರ ಪ್ರಥಮ ಕಮ್ಯುನಿಸ್ಟ್ ಸರಕಾರಕ್ಕೆ ಮತ್ತು 1967ರ ಸಂಯುಕ್ತ ರಂಗ ಸರಕಾರಕ್ಕೆ ಒದಗಿದ ಗತಿ ಈ ಸರಕಾರಕ್ಕೂ ಬರುವುದೇ ಅನ್ನುವ ಸಂದೇಹವೂ ಕೆಲವರನ್ನು ಕಾಡುತ್ತಿದೆ.

ಈ ಕಳವಳಕ್ಕೆ ನಿಜವಾಗಿಯೂ ಕಾರಣವಿದೆ. ಯಾಕೆಂದರೆ ಹೊಸ ಕೇಂದ್ರ ಸರಕಾರ ಮತ್ತು ಅದನ್ನು ಸುತ್ತುವರಿದಿರುವ ದುಷ್ಟಕೂಟವು ವಿರೋಧ ಪಕ್ಷಗಳ ನೇತೃತ್ವದಲ್ಲಿರುವ ಯಾವುದೇ ಸರಕಾರವನ್ನೂ ಸಹಿಸುವುದಿಲ್ಲವೆಂದು ಸ್ಪಷ್ಟಪಡಿಸಿದೆ. ಈಗಿನ ಪ್ರಧಾನಿಯವರೇ, 1959ರಲ್ಲಿ ಅತ್ಯಂತ ಅಪಖ್ಯಾತಿಯ "ವಿಮೋಚನಾ ಹೋರಾಟ" ದ ಮೂಲಕ ಮತ್ತು 1967-69 ರಲ್ಲಿ ಪಕ್ಷಾಂತರಗಳ ಮೂಲಕ ಅಂದಿನ ಸರಕಾರಗಳನ್ನು ಉರುಳಿಸಿದ್ದರು.

ಕಳೆದ ವಿಧಾನಸಭಾ ಚುನಾವಣೆಗಳ ಪ್ರಚಾರದ ಸಂದರ್ಭದಲ್ಲಿ ಸ್ವತಃ ಕೆ. ಪಿ. ಸಿ. ಸಿ.-(ಐ) ಅಧ್ಯಕ್ಷರೇ ಎಡ ಮತ್ತು ಪ್ರಜಾಸತ್ತಾತ್ಮಕ ರಂಗಕ್ಕೆ ಮತ ನೀಡುವುದರ ವಿರುದ್ಧ ಜನರನ್ನು ಎಚ್ಚರಿಸಿದ್ದರು. ಇಂತಹ ಸರಕಾರ ಅಸ್ತಿತ್ವಕ್ಕೆ ಬಂದರೆ ಕೇಂದ್ರದೊಂದಿಗೆ ಘರ್ಷಣೆಯಾಗುವ ಸಂಭವವಿದ್ದು, ಕೇರಳದ ಸಮಸ್ಯೆಗಳು ಪರಿಹಾರವಾಗದೇ ಉಳಿಯುವುವೆಂಬುದು ಅವರ ಅಭಿಪ್ರಾಯವಾಗಿತ್ತು. ಸ್ವತಃ ಪ್ರಧಾನಿಯವರೇ ತಮ್ಮ ಎರಡು ದಿನಗಳ ಬಿರುಸಿನ ಚುನಾವಣಾ ಪ್ರಚಾರದಲ್ಲಿ ಈ ಎಚ್ಚರಿಕೆಯನ್ನು ಪದೇಪದೇ ನೀಡಿದ್ದರು. ಆದ್ದರಿಂದ ಪ್ರಧಾನ ಮಂತ್ರಿಯವರು, ಕೇಂದ್ರದ ಅವರ ಸಹೋದ್ಯೋಗಿಗಳು ಮತ್ತು ಕೇರಳದ ಅವರ ಕೈಗೊಂಬೆಗಳು ಹೊಸ ರಾಜ್ಯ ಸರಕಾರಕ್ಕೆ ಸುಗಮವಾಗಿ ಕೆಲಸ ಮಾಡಲು ಬಿಡುವರೇ ಮತ್ತು ರಾಜಕೀಯ ಹಾಗೂ ಆಡಳಿತ ಕ್ರಮಗಳ ಮೂಲಕ ಎಡ-ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆಯನ್ನು ಬಲಪಡಿಸಲು ಬಿಡುವರೇ ಎಂಬ ಪ್ರಶ್ನೆಗಳು ಎದ್ದಿವೆ.

ಕೇಂದ್ರ ಸರಕಾರದೊಂದಿಗೆ ಯಾವುದೇ ಘರ್ಷಣೆಯನ್ನು ಬಯಸುವುದಿಲ್ಲವೆಂದು ಗಣರಾಜ್ಯೋತ್ಸವದಂದು ಮಾಡಿದ ಆ ಬಾನುಲಿ ಭಾಷಣದಲ್ಲಿ ಮುಖ್ಯಮಂತ್ರಿಯವರು ಸ್ಪಷ್ಟಪಡಿಸಿದ್ದಾರೆ. ವಿರೋಧ ಪಕ್ಷಗಳ ನೇತೃತ್ವದಲ್ಲಿರುವ ರಾಜ್ಯ ಸರಕಾರಗಳು ಕೇಂದ್ರದೊಡನೆ ಸಹಕರಿಸಬೇಕೆಂದು ಕೇಂದ್ರ ಸರಕಾರ ಮತ್ತು ಕೇರಳದ ವಿರೋಧ ಪಕ್ಷಗಳು ಹೇಗೆ ಬಯಸುತ್ತಿವೆಯೋ ಅದೇ ರೀತಿಯಲ್ಲಿ ಕೇರಳ ಸರಕಾರದೊಡನೆಯೂ ಕೇಂದ್ರ ಸರಕಾರ ಮತ್ತು ರಾಜ್ಯದ ವಿರೋಧ ಪಕ್ಷಗಳು ಸಹಕರಿಸಬೇಕೆಂದು ಅವರು ಕೇಳಿಕೊಂಡರು. ಸಾಂವಿಧಾನಿಕವಾಗಿಯಾಗಲೀ, ರಾಜಕೀಯವಾಗಿಯಾಗಲೀ ಕೇಂದ್ರ ಮತ್ತು ರಾಜ್ಯ ಸರಕಾರಗಳು ನಾತುಕತೆಗಳ ಮೂಲಕವೇ ದೇಶದ ಸಮಸ್ಯೆಗಳನ್ನು ಪರಿಹರಿಸಬೇಕಲ್ಲದೆ ಅನ್ಯಥಾ ಸಾಧ್ಯವಿಲ್ಲವೆಂದು ಅವರು ಹೇಳಿದರು. ಗವರ್ನರರೂ ಹೊಸ ವಿಧಾನ ಸಭೆಯನ್ನು ಉದ್ದೇಶಿಸಿ ಮಾಡಿದ ತಮ್ಮ ಭಾಷಣದಲ್ಲಿ ಇದನ್ನೇ ಹೇಳಿದ್ದಾರೆ.

1957 ಮತ್ತು 1980 ರೊಳಗಿನ ದೊಡ್ಡ ವ್ಯತ್ಯಾಸ ಕೇರಳದಲ್ಲಿನ ಕಾಂಗ್ರೆಸ್ ಪಕ್ಷಕ್ಕೆ ತಿಳಿದಿದೆ. 1957ರಲ್ಲಿದ್ದುದು ಕೆಲವು ಸ್ವತಂತ್ರ ಸದಸ್ಯರನ್ನೊಳಗೊಂಡ ಕಮ್ಯುನಿಸ್ಟ್ ಸರಕಾರ; ಅಂತಹ ಸರಕಾರದ ವಿರುದ್ಧ ಉಳಿದೆಲ್ಲಾ ಪಕ್ಷಗಳನ್ನು ಎತ್ತಿಕಟ್ಟುವುದು ಸುಲಭವಾಗಿತ್ತು. ಅಲ್ಲದೆ, ದೇಶದ ಉಳಿದೆಲ್ಲಾ ರಾಜ್ಯಗಳಲ್ಲಿ ಕಾಂಗ್ರೆಸ್ ಸರಕಾರಗಳೇ ಇದ್ದು, ಕೇರಳ ಮಾತ್ರ ಹೊರತಾಗಿತ್ತು.

ಆದರೆ ಈಗಿನ ಕೇರಳ ಸರಕಾರವು ಎರಡೂ ಕಮ್ಯುನಿಸ್ಟ್ ಪಕ್ಷಗಳು ಮತ್ತು ಕೆಲವು ಕಮ್ಯುನಿಸ್ಟೇತರ ಪಕ್ಷಗಳ ಮೈತ್ರಿಯ ಫಲವಾಗಿದೆ ಪರಿಣಾಮವಾಗಿ, ಕೇಂದ್ರ ಸರಕಾರದ ದಾಳಿ ಈಗ ಸಿ. ಪಿ. ಐ. (ಎಂ)ನ ಮೇಲೆ ಮಾತ್ರವಲ್ಲ, ಇತರ ಎಲ್ಲಾ ವಿರೋಧ ಪಕ್ಷಗಳ ಮೇಲೂ ಮತ್ತು ಅವುಗಳ ನೇತೃತ್ವದಲ್ಲಿರುವ ಸರಕಾರಗಳ ಮೇಲೂ ಇದೆಯೆಂಬುದು ಒಂಬತ್ತು ರಾಜ್ಯ ಸರಕಾರಗಳ ವಿಸರ್ಜನೆಯಿಂದ ಸ್ಪಷ್ಟವಾಗಿದೆ. ಆದ್ದರಿಂದ, ಕಾಂಗ್ರೆಸ್ಸೇತರ ರಾಜ್ಯ ಸರಕಾರಗಳನ್ನು ಉರುಳಿಸುವ ಕೇಂದ್ರದ ಈ ಕ್ರಮವನ್ನು ಎಲ್ಲಾ ವಿರೋಧ ಪಕ್ಷಗಳೂ ಒಕ್ಕೊರಲಿನಿಂದ ವಿರೋಧಿಸಿದ್ದುವು.

ಕೇರಳದಲ್ಲಿ ವಿರೋಧ ಪಕ್ಷವಾಗಿರುವ ಕಾಂಗ್ರೆಸ್ಸಿಗೆ ಪರಿಸ್ಥಿತಿಯಲ್ಲಿ ಆದ ಬದಲಾವಣೆಯ ಅರಿವಿದೆಯೆಂಬುದು ಪಕ್ಷದ ನಾಯಕರುಗಳ ಕೆಲವು ಹೇಳಿಕೆಗಳಿಂದ ವ್ಯಕ್ತವಾಗುತ್ತದೆ ಅವರು, ಆಳುವ ಸಂಯುಕ್ತ ರಂಗದಲ್ಲಿ ಕಾಂಗ್ರೆಸ್ ಮತ್ತು ಕೇರಳ ಕಾಂಗ್ರೆಸ್‌ಗಳೇ ಮುಂತಾದ ಪ್ರಜಾಸತ್ತಾತ್ಮಕ ಪಕ್ಷಗಳೂ ಇವೆಯೆಂದು ಹೇಳಿದುದನ್ನು ಇಲ್ಲಿ ಗಮನಿಸಬಹುದು. ಆದ್ದರಿಂದ, ಇಂತಹ ಪ್ರಜಾಸತ್ತಾತ್ಮಕ ಪಕ್ಷಗಳು ಆಳುವ ರಂಗದಲ್ಲಿರುವವರೆಗೆ 1959 ರಲ್ಲಿ ಅಥವಾ 1969 ರಲ್ಲಿ ಮಾಡಿದಂತೆ ಮಾಡುವುದು ಅಸಾಧ್ಯವೆಂಬುದನ್ನು ಕಾಂಗ್ರೆಸ್ ನಾಯಕರು ಬಲ್ಲರು.

ಸಿ. ಪಿ. ಐ. (ಎಂ) ಮತ್ತು ಅದರ ಮಿತ್ರ ಪಕ್ಷಗಳು ತಮ್ಮೊಳಗಿನ ಐಕ್ಯತೆಯನ್ನು ಕಾಪಾಡುವುದರೊಂದಿಗೆ, ಕಳೆದ ಚುನಾವಣೆಗಳಲ್ಲಿ ಮತ್ತು ಅದಕ್ಕಿಂತಲೂ ಮೊದಲು ಕಾಂಗ್ರೆಸ್ ಜತೆ ಸೇರಿದ್ದ, ಆದರೆ ಈಗ ತಮ್ಮ ಆ ನಿಲುವನ್ನು ಪುನರ್ವಿಮರ್ಶಿಸಬಯಸುವ ಕೆಲವು ವಿರೋಧ ಪಕ್ಷಗಳೊಂದಿಗೆ ಮೈತ್ರಿಗಾಗಿ ಸತತವಾಗಿ ಶ್ರಮಿಸುತ್ತಿವೆ. ಅಂತಹ ಪಕ್ಷಗಳ ಪೈಕಿ ಜನತಾ ಪಕ್ಷದ ಜನಸಂಘೇತರ ಗುಂಪು, ಕೋಯಾ ನೇತೃತ್ವದ ಇಂಡಿಯನ್ ಯೂನಿಯನ್ ಮುಸ್ಲಿಂಲೀಗ್ ಮುಂತಾದುವು ಮೊದಲಿಗೆ ಕಾಂಗ್ರೆಸ್ ಮೇಲೆ ವಿಶ್ವಾಸವಿರಿಸಿದ್ದರೂ, ಈಗ ಭ್ರಮ ನಿರಸನಹೊಂದಿವೆ. ಜನರ ಸಮಸ್ಯೆಗಳನ್ನು ಬಗೆಹರಿಸುವ ಪ್ರಯತ್ನದಲ್ಲಿ ಸರಕಾರದೊಂದಿಗೆ ಸಹಕರಿಸಬೇಕೆಂಬುದಾಗಿ ಇಡೀ ಸಂಯುಕ್ತರಂಗದ ಪರವಾಗಿ ಮುಖ್ಯಮಂತ್ರಿ ನಯನಾರರು ಆ ಎಲ್ಲಾ ಪಕ್ಷಗಳಿಗೂ ವಿನಂತಿಸಿಕೊಂಡಿದ್ದಾರೆ.

ಆದ್ದರಿಂದ, ಈಗ ಎಡ ಮತ್ತು ಪ್ರಜಾಸತ್ತಾತ್ಮಕ ರಂಗ ಮತ್ತು ಕಾಂಗ್ರೆಸ್‌ಗಳ ನಡುವೆ ಒಂದು ಹೋರಾಟವೇರ್ಪಟ್ಟಿದೆ. ಆಳುವ ರಂಗವು ವಿರೋಧ ಪಕ್ಷಗಳಲ್ಲಿರುವ ಕ್ರಾಂತಿಕಾರಿ, ಪ್ರಜಾಸತ್ತಾತ್ಮಕ ಮತ್ತು ಜಾತ್ಯಾತೀತ ಶಕ್ತಿಗಳನ್ನು ತನ್ನೆಡೆಗೆ ಸೆಳೆದುಕೊಳ್ಳಲು ಪ್ರಯತ್ನಿಸುತ್ತಿದೆಯಾದರೆ, ಕಾಂಗ್ರೆಸ್ ಪಕ್ಷವು ಸಿ. ಪಿ. ಐ. (ಎಂ) ವಿರೋಧಿ ಶಕ್ತಿಗಳನ್ನು ತನ್ನೆಡೆಗೆ ಒಯ್ಯಲು ಪ್ರಯತ್ನಿಸುತ್ತಿದೆ. ಈ ಹೋರಾಟದಲ್ಲಿ ಯಾರು ಜಯಗಳಿಸುವರೆಂಬುದರ ಮೇಲೆ ಕೇರಳದ ರಾಜಕೀಯ ಭವಿಷ್ಯವು ಅವಲಂಬಿಸಿದೆ.

ಈ ಹೋರಾಟವನ್ನು ಕೇರಳದ ತಕ್ಷಣದ ಮತ್ತು ದೀರ್ಘಾವಧಿಯ ಸಮಸ್ಯೆಗಳ ವಿರುದ್ಧ ನಡೆಯುವ ಹೋರಾಟದಿಂದ ಬೇರ್ಪಡಿಸಲು ಸಾಧ್ಯವಿಲ್ಲ. ಹೆಚ್ಚುತ್ತಿರುವ ನಿರುದ್ಯೋಗ, ಜೀವನಾವಶ್ಯಕ ವಸ್ತುಗಳ ಅಭಾವ ಮತ್ತು ಅವುಗಳ ಬೆಲೆಯೇರಿಕೆ, ಕೃಷಿ ಉತ್ಪನ್ನಗಳ ಬೆಲೆಗಳಲ್ಲಿ ಕುಸಿತ, ಗೇರುಬೀಜ, ತೆಂಗಿನ ನಾರು ಮತ್ತು ಕೈಮಗ್ಗವೇ ಮುಂತಾದ ಗುಡಿ ಕೈಗಾರಿಕೆಗಳಲ್ಲಿ ಉಂಟಾಗಿರುವ ಬಿಕ್ಕಟ್ಟು, ಸರಕಾರದ ನೀತಿಗಳನ್ನು ಜಾರಿಗೆ ತರುವಲ್ಲಿ ಆಡಳಿತ ಯಂತ್ರದ ವೈಫಲ್ಯ, ಆಡಳಿತ ಮತ್ತು ರಾಜಕೀಯ ಯಂತ್ರಗಳಲ್ಲಿ ತುಂಬಿ ತುಳುಕುತ್ತಿರುವ ಭ್ರಷ್ಟಾಚಾರ ಸ್ವಜನ ಪಕ್ಷಪಾತ ಮೊದಲಾದುವೇ ಆ ಸಮಸ್ಯೆಗಳು.

ಗವರ್ನರರ ಭಾಷಣದಲ್ಲಿ ಈ ಕೆಲವು ಸಮಸ್ಯೆಗಳು ಮತ್ತು ಅವುಗಳ ಪರಿಹಾರಕ್ಕೆ ಕೈಗೊಳ್ಳಲಿರುವ ಕ್ರಮಗಳು ಸ್ಥೂಲವಾಗಿ ಪ್ರಸ್ತಾಪಿಸಲ್ಪಟ್ಟಿವೆ. ಈಗ ಆರಂಭವಾಗಿರುವ ವಿಧಾನಸಭಾಧಿವೇಶನದಲ್ಲಿ ಅವುಗಳನ್ನು ಇನ್ನೂ ವಿಶದಪಡಿಸಲಾಗುವುದು.

ಎಡ ಮತ್ತು ಪ್ರಜಾಸತ್ತಾತ್ಮಕ ರಂಗದ ಘಟಕಗಳು ತಮ್ಮ ಗಮನವನ್ನು ತಕ್ಷಣ ಹರಿಸಬೇಕಾದ ಕೆಲವು ಸಮಸ್ಯೆಗಳಿವೆ. ಅವುಗಳ ಕುರಿತಾಗಿ ಸಿ.ಪಿ.ಐ.(ಎಂ)ನ ರಾಜ್ಯಸಮಿತಿಯು ಈಗಾಗಲೇ ಚರ್ಚೆ ನಡೆಸಿದ್ದು, ಆ ಚರ್ಚೆಯ ಫಲಿತಾಂಶವನ್ನು ಪರಿಶೀಲನೆಗಾಗಿ ಮತ್ತು ಅವಶ್ಯಕ ಬದಲಾವಣೆಗಳನ್ನು ಮಾಡುವುದಕ್ಕಾಗಿ ಆಳುವ ಸಂಯುಕ್ತರಂಗದ ಮುಂದಿಡಲಾಗುವುದು.

ಸರಕಾರಿ ಉದ್ಯೋಗಗಳಿಗೆ ಜನರನ್ನು ತೆಗೆದುಕೊಳ್ಳುವ ವಿಚಾರದಲ್ಲಾಗಲೀ, ಸರಕಾರಿ ಅಧಿಕಾರಿಗಳನ್ನು ಮತ್ತು ನೌಕರರನ್ನು ಒಂದೆಡೆಯಿಂದ ಇನ್ನೊಂದೆಡೆಗೆ ವರ್ಗಾಯಿಸುವ ವಿಚಾರದಲ್ಲಾಗಲೀ ಅಥವಾ ಅವರ ಭಡ್ತಿ ಮತ್ತು ಸೇವೆಗಳಿಗೆ ಸಂಬಂಧಿಸಿದ ಇತರ ಪ್ರಶ್ನೆಗಳಲ್ಲಾಗಲೀ ಸರಕಾರವು ಅನುಸರಿಸಬೇಕಾದ ಕೆಲವು ನಿಯಮಗಳಿವೆ. ಇದುವರೆಗೆ ಅನೇಕ ಬಾರಿ ಅವುಗಳ ಉಲ್ಲಂಘನೆಯಾಗಿದ್ದರೂ, ಅವನ್ನು ಸರಿಯಾಗಿ ಪಾಲಿಸಬೇಕೆಂಬುದೇ ಸಿ.ಪಿ.ಐ.(ಎಂ)ನ ರಾಜ್ಯ ಸಮಿತಿ ತಳೆದ ನಿರ್ಧಾರ. ಈ ನಿರ್ಧಾರಕ್ಕೆ ಎಲ್ಲಾ ರಾಜಕೀಯ ಪಕ್ಷಗಳೂ ಬದ್ಧರಾಗಿರಬೇಕೆಂಬುದೇ ಅದರ ಅಭಿಪ್ರಾಯ. ಯಾವುದೇ ರಾಜಕೀಯ ಪಕ್ಷವನ್ನು ಅದು ಆಳುವ ರಂಗದ್ದಾಗಿರಲೀ ಅಥವಾ ವಿರೋಧ ಪಕ್ಷವಾಗಿರಲೀ-ಈ ವಿಚಾರಗಳಲ್ಲಿ ತಲೆಹಾಕಲು ಅಥವಾ, ಯಾವನೇ ಒಬ್ಬ ವ್ಯಕ್ತಿಯ ಪರವಾಗಿ ಪ್ರಭಾವ ಬೀರಲು ಬಿಡಬಾರದೆಂದು ಸಿ.ಪಿ.ಐ.(ಎಂ) ನಿರ್ಧರಿಸಿದೆ.

ಎಲ್ಲಾ ರಾಜಕೀಯ ಪಕ್ಷಗಳು ತಮ್ಮ ಶಕ್ತಿಯನ್ನು ವಿವಿಧ ವರ್ಗಗಳ ಜನರ ಜೀವನಕ್ಕೆ ಸಂಬಂಧಿಸಿದ, ಅವರ ಕೆಲಸದ ಪರಿಸ್ಥಿತಿಗೆ ಮತ್ತು ಅವರ ವೇತನಗಳಿಗೆ ಸಂಬಂಧಿಸಿದ ಸಮಸ್ಯೆಗಳ ಪರಿಹಾರಕ್ಕಾಗಿ ವಿನಿಯೋಗಿಸಬೇಕು. ಇದಕ್ಕೆ ಅವುಗಳು ಕೆಲಸ ಮಾಡುವ ಕ್ರಮದಲ್ಲಿ ಮತ್ತು ಆಡಳಿತ ಕ್ರಮದಲ್ಲಿ ಸೂಕ್ತ ಬದಲಾವಣೆಗಳಾಗುವ ಅವಶ್ಯಕತೆಯಿದೆ.

ಆಡಳಿತ ಯಂತ್ರವು ಮೂಲಭೂತವಾಗಿ ಶ್ರಮಜೀವಿಗಳ ವಿರುದ್ಧ, ಅದರಲ್ಲೂ ಸಿ.ಪಿ.ಐ.(ಎಂ)ನ ವಿರುದ್ಧ ಉಪಯೋಗಿಸಲ್ಪಡುತ್ತಿವೆಯೆಂಬುದು ಪಕ್ಷದ ಅಭಿಪ್ರಾಯ. 1957ರಲ್ಲಿ ಮತ್ತು 1967ರಲ್ಲಿ "ಪೋಲೀಸ್ ತನಿಖೆ"ಯೆಂಬ ಕ್ರಮದ ಮೂಲಕ ಅನೇಕ ವಾಮಪಕ್ಷಗಳ ಬೆಂಬಲಿಗರಿಗೆ ಉದ್ಯೋಗಗಳನ್ನು ನಿರಾಕರಿಸಲಾಗಿತ್ತು. ಆ ಪದ್ಧತಿಯನ್ನು 1957ರ ಮತ್ತು 1967ರ ಸರಕಾರಗಳು ಪೂರ್ಣವಾಗಿ ತೊಡೆದುಹಾಕಿದ್ದುವಲ್ಲದೆ, ಅದಕ್ಕೆ ಬಲಿಯಾದವರಿಗೆಲ್ಲಾ ಪುನಃ ಉದ್ಯೋಗಗಳನ್ನು ಕೊಡಲಾಗಿತ್ತು. ಪ್ರಸ್ತುತ ಸರಕಾರ ಅಧಿಕಾರಕ್ಕೆ ಬರುವ ಮುನ್ನ ಇಂತಹ ಪಕ್ಷಪಾತ ಮತ್ತು ಸೇಡಿನಿಂದ ಕೂಡಿದ ಕ್ರಮಗಳನ್ನು ಕೈಗೊಂಡಿದ್ದಲ್ಲಿ ಅವುಗಳನ್ನು ಸರಿಪಡಿಸಬೇಕಾದುದು ಈ ಸರಕಾರದ ಕರ್ತವ್ಯವಾಗಿದೆ. ಆದರೆ ಸರಕಾರದ ನೀತಿಗೆ ಸಂಬಂಧಿಸಿದ ಇತರ ಪ್ರಶ್ನೆಗಳಂತೆಯೇ ಇದನ್ನೂ ಕೂಡ ಎಡ - ಪ್ರಜಾಸತ್ತಾತ್ಮಕ ರಂಗದ ಘಟಕಗಳು ಚರ್ಚಿಸುವುದು ಅಗತ್ಯ.

ಈ ಪ್ರಮುಖ ವಿರೋಧ ಪಕ್ಷಗಳಾಗಿರುವ, ಕಾಂಗ್ರೆಸ್ ಮತ್ತು ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ ತಮ್ಮ ಅಧಿಕಾರಾವಧಿಯಲ್ಲಿ ಸ್ವಜನ ಪಕ್ಷಪಾತ, ಭ್ರಷ್ಟಾಚಾರ ಮತ್ತು ಇತರ ಜನವಿರೋಧಿ ಕ್ರಮಗಳನ್ನು ಕೈಗೊಂಡಿದ್ದವು ಎಂಬ ದೂರುಗಳಿರುವುದು ಗಮನಾರ್ಹ. ಅಂತಹ ಜನ ವಿರೋಧಿ ಕ್ರಮಗಳನ್ನು ಮತ್ತು ನೀತಿಗಳನ್ನು ತೊಡೆದು ಹಾಕುವುದು ಎಡ ಮತ್ತು ಪ್ರಜಾಸತ್ತಾತ್ಮಕ ರಂಗದ ಆದ್ಯ ಕರ್ತವ್ಯ. ಅದನ್ನು ಅದು ಯಶಸ್ವಿಯಾಗಿ ನಿರ್ವಹಿಸುವುದೆಂಬ ಭರವಸೆ ಎಲ್ಲಾ ಪ್ರಜಾಸತ್ತಾತ್ಮಕ ಮತ್ತು ಕ್ರಾಂತಿಕಾರಿ ಶಕ್ತಿಗಳಿಗಿದೆ.

○

ಸಿ. ಐ. ಟಿ. ಯು. ಸಮ್ಮೇಳನಕ್ಕೆ ಸಿದ್ಧತೆ

ಬಂಟ್ವಾಳ ತಾಲ್ಲೂಕು ಬೀಡಿಕೆಲಸಗಾರರ ಸಂಘದ ವಿಶೇಷ ಮಹಾಸಭೆಯು ತಾ. 23-3-1980 ರಂದು, ಸಂಘದ ಅಧ್ಯಕ್ಷ ಬಿ. ಎಚ್. ಬಂಗೇರರ ಅಧ್ಯಕ್ಷತೆಯಲ್ಲಿ ಜರಗಿತು.

ಪ್ರಾರಂಭದಲ್ಲಿ ಸಂಘದ ಕಾರ್ಯದರ್ಶಿ ಕಾಂ. ಬಿ. ನಾರಾಯಣನವರು ಸಭೆ ಕರೆದ ಉದ್ದೇಶವನ್ನು ವಿವರಿಸಿ ಸ್ವಾಗತಿಸಿದರು.

ಏಪ್ರಿಲ್ ತಿಂಗಳ 7, 8, 9 ರಂದು ದ. ಕ. ಜಿಲ್ಲಾ ಸಿ. ಐ. ಟಿ. ಯು. 2ನೇ ಸಮ್ಮೇಳನವು ಮಂಗಳೂರಲ್ಲಿ ಸೇರಲಿರುವುದರಿಂದ, ಈ ಸಮ್ಮೇಳನವನ್ನು ಸರ್ವ ರೀತಿಯಲ್ಲಿ ಯಶಸ್ವಿಗೊಳಿಸಲು ತಾಲ್ಲೂಕಿನ ಎಲ್ಲಾ ಬೀಡಿಕೆಲಸಗಾರರಿಗೆ ಈ ಸಭೆಯು ಕರೆ ನೀಡಿತು.

ಬೀಡಿ ಮಜೂರರಿಗೆ ಸಲ್ಲತಕ್ಕ ಹಬ್ಬಗಳ ರಜಾ ಸಂಬಳವನ್ನು ತಡೆಹಿಡಿದಿರುವ ಮಾಲಕರ ನೀತಿಯನ್ನು ಖಂಡಿಸಿ, ಈ ಕೂಡಲೇ ಬೀಡಿ ಮಜೂರರಿಗೆ ಹಬ್ಬದ ರಜಾ ಸಂಬಳವನ್ನು ವಿತರಣೆ ಮಾಡಬೇಕೆಂದು ಮಾಲಕರನ್ನು ಈ ಸಭೆಯು ಒತ್ತಾಯಿಸಿತು.

ಬೀಡಿಕಾರ್ಮಿಕರ ಮುಂದಾಳುಗಳಾದ ಕಾಂ. ಮಂಜುನಾಥ ಸಪಲ್ಯ, ಬಿ. ರುಕ್ಮಯ ಪೂಜಾರಿ, ಕಾಂ. ಬಿ. ವಾಸುಗಟ್ಟಿ, ಕಾಂ. ಬಿ. ಗೋಪಾಲಗೌಡ ಮೊದಲಾದವರು ಮಾತನಾಡಿದ ಬಳಿಕ ಸಭೆ ಧನ್ಯವಾದಗಳೊಂದಿಗೆ ಮುಕ್ತಾಯವಾಯಿತು.

○

ಚಂದಾ ವಿವರ

ಬಿಡಿಪ್ರತಿ	40 ಪೈಸೆ
6 ತಿಂಗಳಿಗೆ	10 ರೂ.
ಒಂದು ವರ್ಷಕ್ಕೆ	20 ರೂ.

ಪುಟ್ಟ ರಾಜ್ಯದಲ್ಲೊಂದು ದೊಡ್ಡ ಪಾರ್ಟಿ :

ತ್ರಿಪುರಾ ಬಗ್ಗೆ ವಿಶೇಷ ಲೇಖನ

[ಹಿಂದಿನ ಸಂಚಿಕೆಯಿಂದ]

ಅನೇಕ ವರ್ಷಗಳ ಕಾಲ ಯಾವುದೇ ಜಮೀನ್ದಾರನಾಗಲೀ ಅಥವಾ ಸರಕಾರಿ ಅಧಿಕಾರಿಯಾಗಲೀ ಈ ವಿಮೋಚಿತ ಪ್ರದೇಶದೊಳಗೆ ಕಾಲಿಡಲೂ ಹೆದರುತ್ತಿದ್ದಂತಹ ಪರಿಸ್ಥಿತಿ ಇತ್ತು. ಆಗ ಕಮ್ಯುನಿಸ್ಟ್ ಪಾರ್ಟಿಯನ್ನ ಎಲ್ಲರೂ ಆದಿವಾಸಿಗಳ ಪಾರ್ಟಿ ಎಂದೇ ಕರೆಯುತ್ತಿದ್ದರು. ತ್ರಿಪುರಾದಲ್ಲಿ ಕಮ್ಯುನಿಸ್ಟರ ಪ್ರಾಭಲ್ಯ ತಪ್ಪಿಸಬೇಕೆಂದು ಕಾಂಗ್ರೆಸ್ಸಿನವರು ಹೊಸ ಯುಕ್ತಿಯೊಂದನ್ನ ಹೂಡಿದರು. ಪೂರ್ವ ಬಂಗಾಲದಿಂದ ವಲಸೆ ಬರುತ್ತಿದ್ದ ಬಂಗಾಲಿಗಳಿಗೆ ತ್ರಿಪುರಾದಲ್ಲಿ ನೆಲಸುವಂತೆ ಹೀಗೆ ಹೊಸದಾಗಿ ಬಂದು ಉತ್ತೇಜಿಸಿದರು.

ನೆಲಸುವ ಮಧ್ಯಮ ವರ್ಗದ ಬಂಗಾಲಿಗಳನ್ನ ಬಳಸಿಕೊಂಡು ಕಮ್ಯುನಿಸ್ಟರಿಗೆ ವಿರೋಧವಾದ ನೆಲೆಯನ್ನು ಬೆಳೆಸುವ ಯೋಚನೆ ಕಾಂಗ್ರೆಸ್ಸಿಗರದು. 1952 ರ ಆಚೆಗೆ ಬಂದು ತ್ರಿಪುರಾದಲ್ಲಿ ನೆಲೆಸಿದ ಬಂಗಾಲಿಗಳ ಸಂಖ್ಯೆ ಎಷ್ಟೊಂದಿದೆಯೆಂದರೆ ತ್ರಿಪುರಾದ ಈಗಿನ ಜನಸಂಖ್ಯೆಯಲ್ಲಿ (ಹದಿನೆಂಟು ಲಕ್ಷ) ಶೇಕಡಾ 60 ಕ್ಕೂ ಹೆಚ್ಚು ಬಂಗಾಲಿಗಳು. ಅವರಲ್ಲಿ ಹೆಚ್ಚು ಜನ 1952ರಿಂದ ಈಚೆಗೆ ಬಂದು ನೆಲೆಸಿದವರು. ಈ ಹೊಸ ಬೆಳವಣಿಗೆಯಿಂದಾಗಿ ಅರವತ್ತರ ದಶಕದಲ್ಲಿ ಸ್ವಲ್ಪ ಕಾಲ ಎಲ್ಲ ಬಂಗಾಲಿಗಳೂ ಕಾಂಗ್ರೆಸ್ಸಿಗರು, ಎಲ್ಲ ಆದಿವಾಸಿಗಳೂ ಕಮ್ಯುನಿಸ್ಟರುರು ಎನ್ನುವ ಪರಿಸ್ಥಿತಿ ಇತ್ತು.

ಕಮ್ಯುನಿಸ್ಟ್ ವಿಭಜನೆಯಾದಾಗ ತ್ರಿಪುರಾದ ನಾಯಕತ್ವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದೊಂದಿಗೆ ಬಂದಿತು. ಬಲ ಕಮ್ಯುನಿಸ್ಟರ ಜೊತೆ ಹೋದವರು ತೀರ ಕಡಿಮೆ. ತ್ರಿಪುರಾದಲ್ಲಿ ಮಾರ್ಕ್ಸ್‌ವಾದಿಗಳ ಉತ್ಕರ್ಷ ಪ್ರಾರಂಭವಾದದ್ದು 1967ರ ನಂತರ. 1967ರ ಚುನಾವಣೆಯಲ್ಲಿ ಬಂಗಾಲದಲ್ಲಿ ಮಾರ್ಕ್ಸ್‌ವಾದಿಗಳು ಜಯಗಳಿಸಿ ಬಾಂಗ್ಲಾ ಕಾಂಗ್ರೆಸ್ ಹಾಗೂ ಇತರ ಎಡಪಕ್ಷಗಳ ಜೊತೆ ಸೇರಿ ಸಮ್ಮಿಶ್ರ ಸರ್ಕಾರ ರಚಿಸಿದ ಆನಂತರ ತ್ರಿಪುರಾದಲ್ಲಿ ಕೂಡಾ ಪರಿಸ್ಥಿತಿ ಬೇಗ ಬದಲಾಗತೊಡಗಿತು. ಮಾರ್ಕ್ಸ್‌ವಾದಿಗಳು ತ್ರಿಪುರಾದ ಬಂಗಾಲಿಗಳ ನಡುವೆ ಕೂಡಾ ಬೆಳೆಯಲು ಪ್ರಾರಂಭಿಸಿದರು.

ತ್ರಿಪುರಾದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನಾಯಕತ್ವ ಪಕ್ಷವನ್ನು ಬೆಳೆಸಿರುವ ರೀತಿಯಲ್ಲಿ ಕೆಲವು ಬೆರಗುಗೊಳಿಸುವ ಅಂಶಗಳು ಕಂಡುಬರುತ್ತದೆ. ಕರ್ನಾಟಕದಲ್ಲಿ ಮಾರ್ಕ್ಸ್‌ವಾದಿಗಳ ಬೆಳವಣಿಗೆಗೆ ದಾರಿ ತೋರಿ ತೋರಿಸಬಲ್ಲಂತಹ ಅಂಶಗಳು ಇವು. ತ್ರಿಪುರಾದಲ್ಲಿ ಪಕ್ಷದ ಬೆಳವಣಿಗೆಗೆ, ಪಕ್ಷ ಒಟ್ಟಾರೆಯಾಗಿ ಪ್ರಜಾಸತ್ತಾತ್ಮಕ ಹೋರಾಟಗಳನ್ನ ಬಳಸಿಕೊಂಡಿರುವ. ರೀತಿ ಬಹಳ ಸಹಾಯ ಮಾಡಿದೆ. ತ್ರಿಪುರಾದಲ್ಲಿ ಪಕ್ಷದ ಬೆನ್ನೆಲುಬು ಅಲ್ಲಿನ ರೈತ ಸಂಘಟನೆ. ಒಟ್ಟು 79 ಸಾವಿರ ಸದಸ್ಯರನ್ನು ಅಲ್ಲಿನ ರೈತ ಸಂಘಟನೆ ಹೊಂದಿದೆ. ಕಿಸಾನ್ ಸಭಾದಲ್ಲಿ 67,000 ಜನ ಸದಸ್ಯರು ಹಾಗೂ ಆದಿವಾಸಿಗಳ ನಡುವೆ ಇರುವ ರೈತ ಸಂಘಟನೆಯಾದ ಗಣಮುಕ್ತಿ ಪರಿಷತ್ತಿನಲ್ಲಿ 12,000 ಜನ ಸದಸ್ಯರು. ಒಟ್ಟಾರೆಯಾಗಿ 79,000 ಜನ ಸದಸ್ಯರು ಪಕ್ಷದ ಬೆನ್ನೆಲುಬಾಗಿರುವ ರೈತ ಸಂಘಟನೆಯೊಟ್ಟಿಗೆ ಅಲ್ಲಿನ ಪ್ರಜಾಸತ್ತಾತ್ಮಕನಾರಿ ಸಮಿತಿ. (ಮಹಿಳಾ ಸಂಘಟನೆ), ಪ್ರಜಾಸತ್ತಾತ್ಮಕ ಯುವಕ ಸಂಘಟನೆ, ವಿದ್ಯಾರ್ಥಿ ಸಂಘಟನೆ (S. F. I.) ಹಾಗೂ ಕಾರ್ಮಿಕ ಸಂಘಟನೆಗಳೂ ಕೂಡಾ ಪಕ್ಷದ ಬೆಳವಣಿಗೆಯಲ್ಲಿ ಮಹತ್ತಿನ ಪಾತ್ರವಹಿಸಿದೆ.

ಅಷ್ಟೊಂದು ಪುಟ್ಟ ಹಾಗೂ ಹಿಂದುಳಿದ ರಾಜ್ಯದಲ್ಲಿ ಯುವಕ ಸಂಘಟನೆಯಲ್ಲಿ 47 ಸಾವಿರ ಜನ ಸದಸ್ಯರಿದ್ದಾರೆ ಹಾಗೂ ಅಲ್ಲಿನ ಮಹಿಳಾ ಸಂಘಟನೆಯಲ್ಲಿ 47 ಸಾವಿರ ಸದಸ್ಯರಿದ್ದಾರೆ ಎಂದು ತಿಳಿದಾಗ ನಾನು ದಂಗು ಬಡಿದು ಹೋದೆ. ಹಳ್ಳಿಗಾಡಿನ ತ್ರಿಪುರಾದಲ್ಲಿ ದೊಡ್ಡ ರೈತ ಸಂಘಟನೆಯನ್ನು ನಿರೀಕ್ಷಿಸುವುದು ಸ್ವಾಭಾವಿಕ ಆದರೆ ಮಹಿಳಾ ಸಂಘಟನೆ ಅಷ್ಟೊಂದು ಪ್ರಭಲವಾಗಲು ಹೇಗೆ ಸಾಧ್ಯ? ಎನ್ನುವ ಪ್ರಶ್ನೆ ನನ್ನನ್ನು ಭಾಧಿಸಿತು. ಯುವಕ ಸಂಘಟನೆಯ ಬಗ್ಗೆಯೂ ಇಂತಹ ಪ್ರಶ್ನೆ ನನ್ನಲ್ಲಿ ಎದ್ದಿತು.

ತ್ರಿಪುರಾದಲ್ಲಿ ಮಹಿಳಾ ಸಂಘಟನೆ. ಕೆಲವು ಕಡೆ ಆದಂತೆ ಮಧ್ಯಮ ವರ್ಗದ ಮಹಿಳೆಯರಲ್ಲಿನ ಅಥವಾ ನಗರಗಳಲ್ಲಿನ ದುಡಿಯುವ ಮಹಿಳೆಯರನ್ನು ಸಂಘಟಿಸುವಲ್ಲಿ ಮಾತ್ರ ಸೀಮಿತವಾಗಿಲ್ಲ. ತ್ರಿಪುರಾದ ಮಹಿಳಾ ಸಂಘಟನೆಯಲ್ಲಿ ಹಳ್ಳಿಯ ರೈತ ಹೆಂಗಸರು ಪ್ರಮುಖ ಪಾತ್ರವಹಿಸಿದ್ದಾರೆ. ಅವರು ಮಹಿಳಾ ಸಂಘಟನೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಾರೆ. ಹಳೆಯ ಪಾಳೆಯಗಾರಿ ಸಂಸ್ಕೃತಿಯನ್ನು ತೊಡೆಯುವಲ್ಲಿ ಗಂಡಸರಿಗಿಂತ ಹೆಂಗಸರು ನಿಧಾನ. ಹೆಂಗಸರಲ್ಲಿ ಪಟ್ಟಣದ ಹೆಂಗಸರಿಗಿಂತ ಹಳ್ಳಿಯ ಹೆಂಗಸರು ಮತ್ತೂ ನಿಧಾನ ಎನ್ನುವ ನಮ್ಮ ನಂಬಿಕೆಯನ್ನು ಸುಳ್ಳಾಗಿಸುವಷ್ಟರ ಮಟ್ಟಿಗೆ ತ್ರಿಪುರಾದ ಮಹಿಳಾ ಸಂಘಟನೆ ಹಳ್ಳಿಗಳಲ್ಲಿ ಬೆಳೆದಿದೆ. ನಾನು ಭೇಟಿಯಾದ ಒಂದಿಬ್ಬರು ಮುಸ್ಲಿಮ್ ಕಾಮ್ರೇಡ್‌ಗಳು ಹೇಳಿದ ಪ್ರಕಾರ ಹಳೆಯ ಮೌಲ್ಯಗಳನ್ನು ಕಿತ್ತೊಗೆಯುವುದರಲ್ಲಿ ಮುಸ್ಲಿಮ್ ಮಹಿಳೆಯರು ತ್ರಿಪುರಾದಲ್ಲಿ ಇತರರಿಗಿಂತ ಮುಂದು ಎಂದು ತಿಳಿದು ಆಶ್ಚರ್ಯವಾಯಿತು.

ತ್ರಿಪುರಾದ ಪ್ರಜಾಸತ್ತಾತ್ಮಕ ಯುವಕ ಸಂಘಟನೆಯ ಪ್ರಾಮುಖ್ಯತೆ ಅರಿಯಬೇಕಾದರೆ ಅದರ ಬೃಹತ್ ಸದಸ್ಯತ್ವವನ್ನು ನೋಡಿದರೆ ಸಾಲದು. ತ್ರಿಪುರಾದಲ್ಲಿ ನಾನು ಕಾಲಿಟ್ಟ ದಿನದಿಂದ ನನ್ನನ್ನು ಚಕಿತಗೊಳಿಸಿದ ಒಂದಂಶ ಅಲ್ಲಿನ ಪಾರ್ಟಿಯ ಬೇರೆಬೇರೆ ರಂಗದಲ್ಲಿ ನಾಯಕತ್ವದಲ್ಲಿದ್ದ ಯುವಕರ ಸಂಖ್ಯೆ. ತ್ರಿಪುರಾದ ಪಾರ್ಟಿ ಯುವಕರಿಂದ ತುಂಬಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಒಟ್ಟು (52) ಎಂ. ಎಲ್. ಎ. ಗಳಲ್ಲಿ ಅರ್ಧಕ್ಕಿಂತ ಹೆಚ್ಚು ಜನ ನಲವತ್ತಕ್ಕಿಂತ ಕಡಿಮೆ ವಯಸ್ಸಿನವರು. ಇಬ್ಬರು ಎಂ ಎಲ್ ಎ ಗಳು ನಾಮಪತ್ರ ಸಲ್ಲಿಸಿದಾಗ ಅವರಿಗೆ ಚುನಾವಣೆಗೆ ನಿಲ್ಲಲು ಇರುವ ಕನಿಷ್ಟ ವಯೋಮಿತಿಯಾದ ಇಪ್ಪತ್ತೈದು ವರ್ಷ ದಾಟಿ ಎರಡು ತಿಂಗಳಾಗಿತ್ತಂತೆ. ಕಳೆದ ವರ್ಷ ನಡೆದ ಪಂಚಾಯತ್ ಹಾಗೂ ಜಿಲ್ಲಾ ಪರಿಷತ್ ಚುನಾವಣೆಗಳಲ್ಲಿ ನಿಂತು ಜಯಗಳಿಸಿದ ಪಾರ್ಟಿ ಉಮೇದುವಾರರಲ್ಲೂ ಹೆಚ್ಚಾಗಿ ಯುವಕರನ್ನು ಕಾಣಬಹುದು. ಅನೇಕ ಚಾರಿತ್ರಿಕ ಹೋರಾಟಗಳಲ್ಲಿ ಭಾಗವಹಿಸಿ ಅಪಾರ ಅನುಭವ ಪಡೆದಿರುವ ಪಾರ್ಟಿಯ ಹಿರಿಯ ನಾಯಕತ್ವ ವಹಿಸಿಕೊಳ್ಳುತ್ತಿರುವ ಹೊಸ ಹುಮ್ಮಸ್ಸಿನ ಯುವಕರು ತ್ರಿಪುರಾದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಆರೋಗ್ಯಕರ ಬೆಳವಣಿಗೆಯ ಪ್ರತೀಕ.

ತ್ರಿಪುರಾದಲ್ಲಿ ಮಾರ್ಕ್ಸ್‌ವಾದಿಗಳು ಅಧಿಕಾರಕ್ಕೆ ಬಂದದ್ದು 1977ರಲ್ಲಿ. ಆ ಚುನಾವಣೆಯಲ್ಲಿ ಸಿ. ಎಫ್. ಡಿ. ಜೊತೆಗೆ ಮೈತ್ರಿಕೂಟ ರಚಿಸಿ ಗೆದ್ದು ಅಧಿಕಾರಕ್ಕೆ ಬಂದ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಸಿ. ಎಫ್. ಡಿ. ಜನತಾ ಪಕ್ಷದಲ್ಲಿ ವಿಲೀನವಾದ ನಂತರ ಸ್ವಲ್ಪ ಸಮಯ ಜನತಾ ಪಕ್ಷದ ಜೊತೆ ಸರಕಾರದಲ್ಲಿ ಭಾಗವಹಿಸಿತು. 1978 ರಲ್ಲಿ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಎಡ ಸಂಯುಕ್ತ ರಂಗದ ಮೂಲಕ ಚುನಾವಣೆ ಎದುರಿಸಿದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಪ್ರಚಂಡ ಬಹುಮತದಿಂದ ಆರಿಸಿಬಂತು. ಈ ಚುನಾವಣೆಯಲ್ಲಿ ರಾಷ್ಟ್ರೀಯ ಪಕ್ಷವೆನ್ನಿಸಿಕೊಂಡಿರುವ ಎಲ್ಲಾ ಬೂರ್ಜ್ವಾ ಪಕ್ಷಗಳೂ, ಒಂದೂ ಸೀಟನ್ನೂ ಗೆಲ್ಲಲಾರದೆ ಧೂಳೀಪಟವಾಗಿ ಹೋದವು.

ತ್ರಿಪುರಾ ವಿಧಾನಸಭೆಯಲ್ಲಿ ಒಟ್ಟು ಸದಸ್ಯರ ಸಂಖ್ಯೆ : 60

ಸಿ. ಪಿ. ಐ ಎಂ.	:	52
ಆರ್. ಎಸ್. ಪಿ.	:	2
ಫಾರ್ವರ್ಡ್ ಬ್ಲಾಕ್	:	1
ಸ್ವತಂತ್ರ ಅಭ್ಯರ್ಥಿ	:	1
ಎಡ ಸಂಯುಕ್ತ ರಂಗ	:	56
ತ್ರಿಪುರಾ ಉಪಜಾತಿ ಸಮಿತಿ		4

ತ್ರಿಪುರಾದಲ್ಲಿ ನಾನಿದ್ದ ನಾಲ್ಕೈದು ದಿನಗಳಲ್ಲಿ ನಾನು ನೋಡಬೇಕಾದ್ದು ಬಹಳಷ್ಟಿತ್ತು. ಮಾಮೂಲಿ ಪ್ರವಾಸಿಗಳಿರುವ ಪ್ರೇಕ್ಷಣೀಯ ಸ್ಥಳಗಳನ್ನ ನೋಡುವ ಆಸಕ್ತಿಯಿಂದ ನಾನು ತ್ರಿಪುರಾಗೆ ಹೋಗಿರಲಿಲ್ಲ. ಅಂತಹ ಹೇಳಿಕೊಳ್ಳುವಂತಹ ಖ್ಯಾತ ಪ್ರವಾಸೋಧ್ಯಮದ ಜಾಗಗಳಾವುವೂ ತ್ರಿಪುರಾದಲ್ಲಿಲ್ಲ ಕೂಡಾ. ನನಗೆ ತ್ರಿಪುರಾದ ಜನಗಳನ್ನ ಅವರ ರೀತಿ ನೀತಿಗಳನ್ನ ನೋಡಬೇಕಿತ್ತು. ನಮ್ಮ ಪಕ್ಷದ ಕಾರ್ಯಕರ್ತರನ್ನ ಕಾಣಬೇಕಿತ್ತು. ಅವರ ನಡೆ, ನುಡಿ, ರೀತಿ, ನೀತಿ ಜನಗಳೊಟ್ಟಿಗಿನ ಅವರ ಸಂಬಂಧ ಕಾಣಬೇಕಿತ್ತು. ಇದೆಲ್ಲದರ ಜೊತೆಗೆ ನನಗೊಂದು ಕುತೂಹಲ ಕೂಡ ಇತ್ತು. ಅದೆಂದರೆ ಮಾರ್ಕ್ಸಿಸ್ಟ್ ಮಂತ್ರಿಗಳು ಹೇಗಿರುತ್ತಾರೆ ಎಂದು ಕಾಣುವ ಕುತೂಹಲ ಮೂವತ್ತೆರಡು ವರ್ಷ ಅವಿರತವಾಗಿ ಕರ್ನಾಟಕವನ್ನ ಆಳಿರುವ ಕಾಂಗ್ರೆಸ್ಸಿನ ಮಂತ್ರಿಗಳ ಬಗ್ಗೆ ನಾನು ಸಾಕಷ್ಟು ಕೇಳಿದ್ದೇನೆ ಕೂಡಾ. ಮಂತ್ರಿಗಳ ಬಗ್ಗೆ ಸಾಮಾನ್ಯವಾಗಿ ನನಗೆ ಜಿಗುಪ್ಸೆಯಾಗುತ್ತದೆ. ಅವರ ಅಸಹ್ಯ ಹುಟ್ಟಿಸುವ ನಡವಳಿಕೆ, ಸಣ್ಣತನ, ಅಧಿಕಾರದ ಮದ, ಲಂಚಕೋರತನ, ಎಲ್ಲ ಹುಣೆ ಮಾತಾಗಿಬಿಟ್ಟಿದೆ. ಯಾವುದಾದರೂ ಮಂತ್ರಿಯಲ್ಲಿ ಇದೆಲ್ಲ ಕಡಿಮೆ ಇದೆ ಎಂದು ಸುದ್ದಿಯಾದರೂ ಸಾಕು ನಮ್ಮ ಜನ ಆತನನ್ನು ಹಾಡಿ ಹೊಗಳುತ್ತಾರೆ. ಮಂತ್ರಿಗಳಿಗೂ ಪಾಂಡಿತ್ಯ ಇರಬಹುದೇ, ಆತ ವಿಜ್ಞಾನದಲ್ಲಿಯೋ, ಸಮಾಜ ಶಾಸ್ತ್ರದಲ್ಲಿಯೋ, ಅರ್ಥಶಾಸ್ತ್ರದಲ್ಲಿಯೋ ಅಥವಾ ಸಾಹಿತ್ಯದಲ್ಲಿಯೋ ನುರಿತವನಾಗಿರಬಹುದೇ ಎಂದು ತಪ್ಪಿ ಕೂಡಾ ನಾವು ಪ್ರಶ್ನೆ ಮಾಡುವುದಿಲ್ಲ. ಮಂತ್ರಿಯಾಗಲಿಕ್ಕೆ ಪುಡಾರಿತನ ಒಂದು ಮಾತ್ರ ಸಾಕು ಎನ್ನುವಂತಹ ಸರಳ ಜನ ನಾವು. ಹಾಗಾಗಿ ನಮ್ಮ ಮಂತ್ರಿಗಳ ನಡವಳಿಕೆ ಕಣ್ಣಾರೆ ಕಾಣುವ ಆಸಕ್ತಿ ನನಗೆ ತುಂಬ ಇತ್ತು. ತ್ರಿಪುರಾ ತಲುಪಿದ ಮಾರನೆಯ ದಿನವೇ ಮುಖ್ಯಮಂತ್ರಿಗಳ ನಿವಾಸ ಹುಡುಕಿಕೊಂಡು ಹೊರಟೆ. ಆಗ ಬೆಳಗಿನ ಏಳೂವರೆ ಗಂಟೆಯ ಸಮಯ. ಹಿಂದಿನ ದಿನ ಮಳೆ ಬಿದ್ದದ್ದರಿಂದ ಮರ, ಗಿಡ, ಬಳ್ಳಿ ಎಲ್ಲವೂ ಶುಭ್ರವಾಗಿ ತಲೆ ಎತ್ತಿ ನಿಂತಿದ್ದವು.

ಅಗರ್ತರಾ ನೀಟಾದ ಪುಟ್ಟಊರು. ಸೆಕ್ರೆಟಾರಿಯಟ್ ಹಾಗೂ ಮಂತ್ರಿಗಳ ನಿವಾಸ ಇರುವ ಜಾಗ ನಮ್ಮೂರಿನ ಡಿ. ಸಿ. ಆಫೀಸಿನ ಆಸುಪಾಸನ್ನು ನೆನಪಿಗೆ ತರುತ್ತದೆ. ಸೆಕ್ರಟಾರಿಯಟ್ ಎದುರಿನ ಬೀದಿಯ ಹೆಸರು 'ಲೆನಿನ್ ಸರನಾ' ಲೆನಿನ್ ಬೀದಿಯ ಒಂದು ಬದಿಗೆ ಸೆಕ್ರೆಟಾರಿಯಟ್ ಹೈಕೋರ್ಟ್ ಇತ್ಯಾದಿಗಳಿದ್ದರೆ ಮತ್ತೊಂದು ಬದಿಗೆ ಒಂದು ಕೊಳೆ ನೀರು ನಾಲೆ.

(ಮುಂದುವರಿದಿದೆ)

ಪ್ರಜಾಪ್ರಭುತ್ವ ಮತ್ತು ರಾಷ್ಟ್ರೀಯ ಐಕ್ಯತೆ

ಇ. ಎಂ. ಎಸ್. ನಂಬೂದಿರಿಪಾದ್

ರಾಷ್ಟ್ರೀಯ ಐಕ್ಯತೆಯ ಬಗ್ಗೆ ನಾವು ಚರ್ಚಿಸುತ್ತಿರುವ ಸಮಯದಲ್ಲೇ ರಾಷ್ಟ್ರವು ಛಿದ್ರತೆಯತ್ತ ತೆರಳುತ್ತಿದೆ. ಅಸ್ಸಾಂ, ಮೇಘಾಲಯ ಮತ್ತಿತರ ರಾಜ್ಯಗಳಲ್ಲಿ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ನಡೆಯುತ್ತಿರುವ ಘಟನೆಗಳು ರಾಷ್ಟ್ರೀಯ ಛಿನ್ನತೆ ಬೆಳೆಯುತ್ತಿರುವ ಮಟ್ಟವನ್ನು ತೋರಿಸುತ್ತದೆ.

ದೇಶದ ಎಲ್ಲ ರಾಜಕೀಯ ಪಕ್ಷಗಳ ಮತ್ತು ಈಗ ವಿಸರ್ಜಿತವಾದ ಅಸ್ಸಾಂ ವಿಧಾನಸಭೆಯಲ್ಲಿದ್ದ ಪಕ್ಷಗಳ ಒಂದು ಸಮ್ಮೇಳನವನ್ನು ಪ್ರಧಾನಮಂತ್ರಿ ಕರೆದಿರುವುದು ಒಳ್ಳೆಯದು. ಈ ಬಿಕ್ಕಟ್ಟಿನ ಸಂದರ್ಭವನ್ನು ಈ ಸಮ್ಮೇಳನ ಪರಿಹರಿಸುವುದೆಂದು ನಾವು ಆಶಿಸೋಣ. (ಈ ಸಮ್ಮೇಳನ ಈಗ ನಡೆದು, ಅದು ಏಕಕಂಠದಲ್ಲಿ, ಆಂದೋಲನವನ್ನು ನಿಲ್ಲಿಸಿರೆಂದು ಅಸ್ಸಾಂ ಜನತೆಗೆ ಕರೆಕೊಟ್ಟಿದೆ.)

ಈಶಾನ್ಯ ಪ್ರದೇಶ:

ಅಸ್ಸಾಂನಲ್ಲಿರುವ ಪ್ರಶ್ನೆ, ರಾಜ್ಯದಲ್ಲಿ ಅಸ್ಸಾಮೀಯರು ಮತ್ತು ಅಸ್ಸಾಮೀಯರಲ್ಲದವರು ಬದುಕುತ್ತಿರುವ ಮತ್ತು ಕೆಲಸಮಾಡುತ್ತಿರುವ ವಿಚಾರಕ್ಕೆ ಸಂಬಂಧಿಸಿದ್ದಲ್ಲ. ಭಾರತದ ಪೌರತನದ ಇಡೀ ಪ್ರಶ್ನೆ ಇಲ್ಲಿದೆ. ಏಕೆಂದರೆ "ವಿದೇಶೀಯರು" ಎಂದು ಕರೆಯಲಾಗುತ್ತಿರುವ ಬೇರೆ ರಾಜ್ಯಗಳ ಜನತೆ ಅಸ್ಸಾಂನಲ್ಲಿ ನೆಲೆಸಿ, ಅಲ್ಲಿನ ತೋಟಗಳು, ಎಣ್ಣೆ ಕೈಗಾರಿಕೆ ಮತ್ತು ಕೇಂದ್ರ ಸರ್ಕಾರದ ಅನೇಕ ಕಚೇರಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

"ವಿದೇಶೀಯರನ್ನು" ಗುರುತಿಸಿ ಅವರು ಭಾರತೀಯ ಪೌರರೆಂದು ಲೆಕ್ಕಿಸದೆ ಅವರನ್ನು ರಾಜ್ಯದಾಚೆ ಕಳಿಸಬೇಕು ಎಂಬ ಬೇಡಿಕೆಯು ಭಾರತೀಯ ಸಾಮಾನ್ಯ ಪೌರತನದ ಕಲ್ಪನೆಯನ್ನೇ ಅಲ್ಲಗಳೆಯುತ್ತದೆ. ಈ ಬಗ್ಗೆ ಭಾವನೆಗಳನ್ನು ಕೆರಳಿಸಿ, ನೂರಾರು ಜನರ ಮೇಲೆ ಹಲ್ಲೆ ನಡೆದು, ಅನೇಕರ ಕೊಲೆ ಆಗಿರುವುದೆಲ್ಲವೂ ಅಲ್ಲಿನ ಪರಿಸರ ಬಿಕ್ಕಟ್ಟಿನಿಂದ ಕೂಡಿದೆ ಎಂಬುದನ್ನು ತೋರಿಸುತ್ತದೆ.

ಈ ಬಿಕ್ಕಟ್ಟು ಅಸ್ಸಾಂನಲ್ಲೇ ಹೆಚ್ಚಾಗಿರುವುದು. ಮೇಘಾಲಯ, ಮಣಿಪುರಗಳಲ್ಲೂ ಈ ಸಮಸ್ಯೆ ಇದ್ದರೂ ಅದರ ಮಟ್ಟ ಹೆಚ್ಚಾಗಿಲ್ಲ. ಈ ಪ್ರದೇಶದ ನಾಗಾಲ್ಯಾಂಡ್ ಮತ್ತು ಮಿಜೋರಾಮ್‌ಗಳು ಸರ್ಕಾರಿ ಪಡೆಗಳು ಮತ್ತು ಸಾಯುಧ ಹೋರಾಟಗಾರರ ನಡುವಿನ ಕದನಗಳ ಕಣವಾಗಿವೆ.

ಪಶ್ಚಿಮ ಗಡಿ:

ದೇಶದ ಗಡಿ ಪ್ರದೇಶದಲ್ಲಿ ಈ ಜಗಳ ನಡೆಯುತ್ತಿರುವುದರಿಂದ ಇದು ದೇಶದ ಸ್ವಾತಂತ್ರ್ಯ ಮತ್ತು ಐಕ್ಯತೆಗೆ ಅಪಾಯಕಾರಿಯಾಗಿದೆ. ಇದಕ್ಕೆ ಪರ್ಯಾಯವಾದಿಯೇ ಹೆಚ್ಚು ಆತಂಕಕಾರಿಯಾಗಿರುವ (ಆದರೆ ಭಿನ್ನ ರೀತಿಯ) ಇನ್ನೊಂದು ವಿಚಾರವೆಂದರೆ, "ಇಸ್ಲಾಮಿಕ್ ಬಾಂಬ್" ಎಂಬ ಕಲ್ಪನೆಯೊಡನೆ ಹುಡುಗಾಟವಾಡುವ ಅಧಿಕಾರಿಗಳನ್ನು ಹೊಂದಿರುವ ಪಾಕಿಸ್ತಾನಕ್ಕೆ ಅಮೆರಿಕದ ಆಯುಧ ಸರಬರಾಜು. ಇವೆರಡೂ, ದೇಶದ ಭವಿಷ್ಯದ ಬಗ್ಗೆ ನಾವೆಲ್ಲರೂ ಕುಳಿತೆ, ಚರ್ಚಿಸುವಂತೆ ಮಾಡಿವೆ.

ಇವಲ್ಲದೆ, ದೇಶದಲ್ಲಿ ಮೇಲ್ವರ್ಗದ ಭೂಮಾಲೀಕರು ಹರಿಜನರ ಮೇಲೆ, ಹಿಂದೂ ಮತಾಂಧರು ಮತೀಯ ಅಲ್ಪಸಂಖ್ಯಾತರ ಮೇಲೆ ಹಲ್ಲೆಗಳನ್ನು ಏರ್ಪಡಿಸುತ್ತಿದ್ದಾರೆ. ಪರಸ್‌ಭಿಘಾ. ಪಿಪ್ರಾ, ಅಲಿಘರ್ ಮತ್ತು ಜೆಂಷೆಡ್‌ಪುರಗಳ ಇಂಥ ಘಟನೆಗಳಿಂದ ಅನೇಕರ ಸಾವು ಸಂಭವಿಸಿ, ಆಸ್ತಿ ನಷ್ಟವಾಗಿದೆ. ಇಂಥ ಪ್ರತಿಯೊಂದು ಜಾತಿ ಅಥವಾ ಮತೀಯ ಕಲಹದ ಹಿಂದೆ ಹಲವಾರು ಸಣ್ಣ ಘಟನೆಗಳು ನಡೆದಿರುತ್ತಿದ್ದು, ಇವೆಲ್ಲವೂ ದೇಶದಲ್ಲಿ ವಿವಿಧ ಜಾತಿ ಮತ್ತು ಮತೀಯ ಗುಂಪುಗಳ ನಡುವೆ ಕೆಟ್ಟಿರುವ ಸಂಬಂಧಗಳ ಮಟ್ಟವನ್ನು ತೋರಿಸುತ್ತವೆ.

ಸಮಿತಿಯ ನೇಮಕ ಮತ್ತು ವಾಪಸಾತಿ:

1960ರ ದಶಕದ ಆರಂಭದಲ್ಲಿಯೇ ಆಗ ಪ್ರಧಾನಿಯಾಗಿದ್ದ ಜವಾಹರಲಾಲ್ ನೆಹರು ಅವರು ದೇಶದ ಐಕ್ಯತೆ ಮತ್ತು ಒಗ್ಗಟ್ಟಿಗೆ ಅಪಾಯವಿರುವುದನ್ನು ಗಮನಿಸಿ, ಜಾತೀಯತೆ, ಮತೀಯತೆ, ಪ್ರಾದೇಶಿಕತೆ, ಮತ್ತ ಭಾಷಾಂಧತೆ ಮುಂತಾದ ಅಪಾಯಕಾರಿ ಶಕ್ತಿಗಳನ್ನು ಗಮನಿಸಿದ್ದರು. ಇವುಗಳ ವಿರುದ್ಧ ಹೋರಾಡಲು ಎಲ್ಲ ರಾಜಕೀಯ ಪಕ್ಷಗಳು ಮತ್ತು ಸಾಮಾಜಿಕ-ಸಾಂಸ್ಕೃತಿಕ ಸಂಘಗಳ ಸಹಕಾರವನ್ನು ಕೋರಿ, ಒಂದು ರಾಷ್ಟ್ರೀಯ ಐಕ್ಯತಾ ಸಮ್ಮೇಳನವನ್ನು ಕರೆದಿದ್ದರು. ಇದರಲ್ಲಿ ರಾಷ್ಟ್ರೀಯ ಐಕ್ಯತಾ ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯನ್ನು ನಂತರ ಅನೇಕ ಉಪಸಮಿತಿಗಳಾಗಿ ವಿಭಜಿಸಿ, ಪ್ರತಿಯೊಂದು ಉಪಸಮಿತಿಯೂ ರಾಷ್ಟ್ರೀಯ ಐಕ್ಯತೆಯ ಒಂದೊಂದು ಅಂಶವನ್ನು ನೋಡಿಕೊಳ್ಳುವಂತೆ ಯೋಜಿಸಲಾಗಿತ್ತು.

ಆದರೆ ಚೀನದೊಡನೆ ಭಾರತೀಯ ಪಡೆಗಳ ಕದನ ಆರಂಭವಾದ ನಂತರ ಈ ವ್ಯವಸ್ಥೆಯನ್ನು ತೆಗೆದುಹಾಕಲಾಯಿತು. "ಆಕ್ರಮಣಕಾರಿಯ ವಿರುದ್ಧದ ಹೋರಾಟದಲ್ಲಿ ಭಾರತದ ದೇಶಪ್ರೇಮಿ ಜನತೆ ಈಗಾಗಲೇ ಒಗ್ಗೂಡಿದ್ದಾರೆ" ಮತ್ತು ಆದ್ದರಿಂದ ರಾಷ್ಟ್ರೀಯ ಐಕ್ಯತಾ ಸಮಿತಿಯ ಉಪಸಮಿತಿಗಳು ಕೈಗೊಂಡಿರುವ ಕಾರ್ಯಗಳು ನಿಷ್ಫಲ ಯತ್ನಗಳಾಗುತ್ತವೆ ಎಂಬ ಮನವಿಯ ಆಧಾರದ ಮೇಲೆ ಸಮಿತಿಯನ್ನು ಕೈಬಿಡಲಾಯಿತು.

1967 ಮತ್ತು 1969ರಲ್ಲಿ ಮತೀಯ ಕಲಹಗಳು ಸರಣಿಯಲ್ಲಿ ನಡೆದಾಗ ಮೇಲಿನ ವಾದದ ಪೊಳ್ಳುತನ ಬಯಲಾಯಿತು. ಆಗ ಪ್ರಧಾನಿಯಾಗಿದ್ದ ಇಂದಿರಾಗಾಂಧಿಯವರು ರಾಷ್ಟ್ರೀಯ ಐಕ್ಯತಾ ಸಮಿತಿಯನ್ನು ಪುನರುಜ್ಜೀವನಗೊಳಿಸುವುದರ ಮೂಲಕ ಈ ಸಮಸ್ಯೆಯನ್ನು ಪರಿಹರಿಸಲು ಆಲೋಚಿಸಿದ್ದರು. ಈಶಾನ್ಯ ಪ್ರದೇಶದ ಬಿಕ್ಕಟ್ಟು, ಹರಿಜನರ ಮೇಲೆ ಹಲ್ಲೆ, ಮತೀಯ ಗಲಭೆಗಳು, ಮತ್ತು ಭಾರತೀಯ ಜನತೆಯ ಗುಂಪುಗಳ ನಡುವೆ ಇರುವ ಅನೇಕ ಬಿಕ್ಕಟ್ಟುಗಳನ್ನು ಪರಿಹರಿಸಲು ಅವರು ಮತ್ತೊಮ್ಮೆ ಹೊಸ ಸಮಿತಿಯನ್ನು ರಚಿಸುವರೋ ಹೇಗೋ ಗೊತ್ತಿಲ್ಲ.

ಪರಿಸ್ಥಿತಿ ಅತ್ಯಂತ ಬಿಕ್ಕಟ್ಟಿನದಾಗಿರುವುದರಿಂದ ಭಾರತ ಜನತೆಯ ಪ್ರತಿಯೊಂದು ಗುಂಪೂ, ಸರ್ಕಾರ ಮತ್ತು ವಿರೋಧ ಪಕ್ಷಗಳೂ ರಾಜಕಾರಣಿಗಳೂ, ಸಾಮಾಜಿಕ-ಸಾಂಸ್ಕೃತಿಕ ಸಂಘಗಳ ನಾಯಕರೂ ಎಲ್ಲರೂ, ದೇಶವನ್ನು ಛಿದ್ರತೆಯಿಂದ ಪಾರುಮಾಡುವುದು ತಮ್ಮ ಆದ್ಯ ಕರ್ತವ್ಯ ಎಂದು ಭಾವಿಸಬೇಕಾಗಿದೆ.

ಕಾರ್ಯನೀತಿಯ ಪ್ರಶ್ನೆಗಳು:

ಆಡಳಿತ ವರ್ಗಗಳು, ಅವುಗಳ ಸಾಮಾಜಿಕ-ಸಾಂಸ್ಕೃತಿಕ ಮತ್ತು ರಾಜಕೀಯ ಸಂಘ ಸಂಸ್ಥೆಗಳು ಮತ್ತು ಆ ಪ್ರದೇಶದ ಸರ್ಕಾರಗಳ ಜೊತೆ ನಾವು ಚಳುವಳಿಯು ತೀವ್ರ ಭಿನ್ನಾಭಿಪ್ರಾಯಗಳಿರುವ ಕೆಲವು ಕಾರ್ಯನೀತಿಯ ಪ್ರಶ್ನೆಗಳು ಈ ಬಿಕ್ಕಟ್ಟಿನಲ್ಲಿ ಸೇರಿವೆ. ಈ ಕಲಹಗಳನ್ನೇ ಮುಂದು ಮಾಡಿ, ಬಿಕ್ಕಟ್ಟಿನ ಪರಿಸ್ಥಿತಿಯನ್ನು ಪರಿಹರಿಸುವುದರಲ್ಲಿ ರೂಢಿಸಬೇಕಾಗಿರುವ ಐಕ್ಯತೆಯನ್ನು ಒಡೆಯುವ ಇಚ್ಛೆ ನಮಗಿಲ್ಲವಾದರೂ, ಈ ಸಮಸ್ಯೆಗಳನ್ನು ಪರಿಹರಿಸಬೇಕಾದಾಗ ಅನುಸರಿಸುವ ಐಕ್ಯ ಕಾರ್ಯಾಚರಣೆಗೆ ಒಪ್ಪದಿರುವ ಆಡಳಿತ ವರ್ಗಗಳ ಗಮನವನ್ನು ಈ ಬಗ್ಗೆ ಸೆಳೆಯುವುದು ಅನಿವಾರ್ಯವಾಗಿದೆ.

ಉದಾಹರಣೆಗೆ, ಆಳುವ ವರ್ಗದ ಹೃದಯಕ್ಕೆ ಹತ್ತಿರವಾದ "ಬಲಿಷ್ಠ ಕೇಂದ್ರ"ದ ಘೋಷಣೆಯನ್ನೇ ತೆಗೆದುಕೊಳ್ಳಿ. ರಾಜ್ಯಗಳ ಸ್ವಾಯತ್ತತೆಯ ಬಗ್ಗೆ ಮಾತನಾಡುವವರೆಲ್ಲರೂ ರಾಷ್ಟ್ರೀಯ ಐಕ್ಯತೆ ಮತ್ತು ಒಗ್ಗಟಿನ "ದ್ರೋಹಿ"ಗಳು ಎಂದು ಇವರು ಖಂಡಿಸುತ್ತಾರೆ. ಆದರೆ, ಈಶಾನ್ಯದಲ್ಲಿ ಉದ್ಭವಿಸಿರುವ ಘಟನೆಗಳನ್ನು, ರಾಜ್ಯಗಳ ಅಧಿಕಾರಗಳನ್ನೆಲ್ಲ ನುಂಗುವ ಕೇಂದ್ರವೊಂದು ಪರಿಹರಿಸಬಲ್ಲುದೇ ಎಂಬುದನ್ನು ಇವರು ಆಲೋಚಿಸಬೇಕು. ಹಾಗೆ ನೋಡಿದರೆ ಇವತ್ತಿನದಕ್ಕಿಂತ ಬಲಿಷ್ಠವಾಗಿದ್ದ ಕೇಂದ್ರಸರ್ಕಾರವಿದ್ದಾಗಲೇ ನಾಗಾ ಮತ್ತು ಮಿಜೋಗಳ ಸಮಸ್ಯೆ ಉದ್ಭವಿಸಿತ್ತು. "ಬಲಿಷ್ಠ ಕೇಂದ್ರ ಸರ್ಕಾರ" ಕಾಶ್ಮೀರದ ಸಮಸ್ಯೆಯನ್ನೂ ಬಗೆಹರಿಸಲಾರದು. ಅದು ಅನೇಕ ವರ್ಷಗಳಿಂದ ಆರದ ಹುಣ್ಣಾಗಿಯೇ ಕುಳಿತಿದೆ.

ಕಳೆದ 32 ವರ್ಷಗಳಲ್ಲಿ ಉದ್ಭವಿಸಿರುವ ಸಮಸ್ಯೆಗಳಾದ ಕಾಶ್ಮೀರ, ನಾಗಾಲ್ಯಾಂಡ್, ಮಿಜೋರಾಮ್, ತಮಿಳುನಾಡು ಮತ್ತು ದೇಶದ ವಿವಿಧ ಭಾಗಗಳ ಗಿರಿಜನ ಪ್ರಶ್ನೆಗಳನ್ನೆಲ್ಲ ಗಮನಿಸಿದರೆ, ಈ ಅಗಾಧ ದೇಶದ ವಿವಿಧ ಜನತೆಗಳ ವೈವಿಧ್ಯತೆಯ ಸತ್ಯವನ್ನು ಗುರುತಿಸಿದಾಗ ಮಾತ್ರ ಭಾರತೀಯ ಐಕ್ಯತೆಯನ್ನು ಉಳಿಸಿ ಬಲಗೊಳಿಸಬಹುದು ಎನ್ನಿಸುತ್ತದೆ. ಭಾರತದ ರಾಜಕೀಯವನ್ನು ಬಿಟ್ಟರೆ ಬೇರೆಲ್ಲೂ "ವೈವಿಧ್ಯತೆಯಲ್ಲಿ ಐಕ್ಯತೆ"ಯ ಕಲ್ಪನೆ ಚೆನ್ನಾಗಿ ಹೊಂದಿಕೊಳ್ಳುವುದಿಲ್ಲ.

ಕೇಂದ್ರ ವ್ಯವಸ್ಥೆಯ ತಿರುಳು:

ನನ್ನ ಯೌವ್ವನದ ದಿನಗಳಲ್ಲಿ "ಭಾರತ ಒಂದು ದೇಶವೇ?" ಎಂಬ ಪ್ರಶ್ನೆಯ ಬಗ್ಗೆ ಬ್ರಿಟಿಷ್ ದೊರೆಗಳ ವಕ್ತಾರರು ಮತ್ತು ರಾಷ್ಟ್ರೀಯವಾದಿಗಳ ನಡುವೆ ನಡೆಯುತ್ತಿದ್ದ ಉಗ್ರ ಚರ್ಚೆಗಳನ್ನು ನಾನು ಸ್ಮರಿಸುತ್ತೇನೆ. ಭಾರತ ಒಂದು ದೇಶವೇ ಅಲ್ಲ, ಯುದ್ಧಮಾಡುವ ಜಾತಿಗಳ, ಮತಗಳ ಮತ್ತು ಭಾಷಾ ಪಂಗಡಗಳ ಒಂದು ಗುಂಪು ಎಂದು ಬ್ರಿಟಿಷ್ ದೊರೆಗಳು ವಾದಿಸುತ್ತಿದ್ದರು. ಈ ವೈವಿಧ್ಯತೆ ಇದ್ದರೂ ದೇಶದಲ್ಲಿ ಐಕ್ಯತೆ ಇದೆ ಎಂದು ರಾಷ್ಟ್ರೀಯವಾದಿಗಳು ಉತ್ತರಿಸುತ್ತಿದ್ದರು. ಜನಗಳ ವೈವಿಧ್ಯತೆಯನ್ನು ಗುರುತಿಸಿದರೆ ಮಾತ್ರ ಮತ್ತು ಭಾರತದಲ್ಲಿ ಜೀವಿಸುವ ಅನೇಕ ಜನತೆಗಳ ನಡುವೆ ಗರಿಷ್ಠ ಪ್ರಮಾಣದ ಒಪ್ಪಂದದ ಮೇಲೆ ಭಾರತದ ರಾಜಕೀಯವನ್ನು ಬಲಗೊಳಿಸಿದರೆ ಮಾತ್ರ ಭಾರತ ಒಂದು ಐಕ್ಯ ಮತ್ತು ಬಲಿಷ್ಠ ರಾಷ್ಟ್ರವಾಗಬಹುದು ಎಂಬುದನ್ನು, ಅಂಥ ಉಗ್ರ ಚರ್ಚೆಗಳು ನಡೆದ ನಂತರದ ದಶಕಗಳು ತೋರಿಸಿಕೊಟ್ಟಿವೆ.

ಹಾಗೆ ನೋಡಿದರೆ, ನಮ್ಮ ಸಂವಿಧಾನದ ಫೆಡರಲ್ ವ್ಯವಸ್ಥೆಯ ಮುಖ್ಯ ತಿರುಳು ಇದೇ. ಕೇಂದ್ರಕ್ಕೆ ಅನೇಕ ಮುಖ್ಯ ಕರ್ತವ್ಯಗಳು ಇವೆ. ರಾಜ್ಯಗಳಿಗೂ ಚಟುವಟಿಕೆಗಳ ವಿಸ್ತಾರ ರಂಗ ಇದೆ. ಮೊದಲನೆಯದು ತನ್ನ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸದೆ ಇದ್ದರೆ ಎರಡನೆಯದು ಅಸ್ತಿತ್ವದಲ್ಲಿದ್ದು ಬೆಳೆಯಲು ಸಾಧ್ಯವಿಲ್ಲ. ಹಾಗೆಯೇ, ರಾಜ್ಯಗಳು ಸರಿಯಾಗಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸದೆ ಇದ್ದರೆ ಕೇಂದ್ರ ಉಳಿಯಲು ಸಾಧ್ಯವಿಲ್ಲ.

ಕಾರ್ಯಾಚರಣೆಯಲ್ಲಿ ನೇತೀಕರಣ:

ಆದರೆ, ಕಾರ್ಯದಲ್ಲಿ ಇದನ್ನು ನೇತ್ಯಾತ್ಮಕವಾಗಿ ಮಾಡಲಾಗಿದೆ: a) ಕೇಂದ್ರವನ್ನು ಸಾಧ್ಯವಾದಷ್ಟೂ ದುರ್ಬಲಗೊಳಿಸಲು ಇಚ್ಛಿಸುವ ಪ್ರತ್ಯೇಕತಾವಾದಿಗಳು ಮತ್ತು b) ರಾಜ್ಯಗಳ ಅಧಿಕಾರಗಳನ್ನು ಸಾಧ್ಯವಾದಷ್ಟೂ ಕಬಳಿಸಲಿಚ್ಛಿಸುವ "ಬಲಿಷ್ಠ ಕೇಂದ್ರ ಸರ್ಕಾರ"ದ ಪರವಾದಿಗಳು ಇದನ್ನು ನಡೆಸಿದ್ದಾರೆ. ಸದ್ಯದಲ್ಲಿ ಎರಡನೆಯವರೇ ಈಗ ಹೆಚ್ಚು ಬಲಶಾಲಿಗಳಾಗಿದ್ದು "ಒಂದು ಬಲಿಷ್ಠ ಕೇಂದ್ರ"ದ ಮಾತಿನ ಮೂಲಕ ಕೆಟ್ಟ ಶಕ್ತಿಗಳನ್ನು ಬಲಗೊಳಿಸುತ್ತಿದ್ದಾರೆ.

ಅಸ್ಸಾಂ ಸಮಸ್ಯೆಯ ಬಗ್ಗೆ ವ್ಯವಹರಿಸುವುದರಲ್ಲಿ ದೇಶದ ಎಲ್ಲ ರಾಜಕೀಯ ಪಕ್ಷಗಳ ಸಹಕಾರವನ್ನು ಪ್ರಧಾನಿ ಕೋರಿರುವುದು ಈ ಸಂದರ್ಭದಲ್ಲಿ ಗಮನಾರ್ಹವಾದದು. ಅದೇ ವೇಳೆಯಲ್ಲೇ, ತನ್ನ ಪಕ್ಷದ ಕೈಕೆಳಗಿರದ ಯಾವ ರಾಜ್ಯ ಸರ್ಕಾರವೂ ಉಳಿಯಬಾರದೆಂಬ ಸಿದ್ಧಾಂತವನ್ನೂ ಆಕೆ ಆಚರಣೆಗೆ ತಂದಿದ್ದಾರೆ. ಯಾವ ರಾಜ್ಯ ಸರ್ಕಾರಗಳು ಹೇಳಿದಂತೆ ಕೇಳುವುದಿಲ್ಲವೋ ಅವುಗಳನ್ನು ವಜಾ ಮಾಡಲಾಗುವುದೆಂದು ಅವರ ಪಕ್ಷದ ಅನೇಕರು ಬಹಿರಂಗವಾಗಿ ಹೇಳುತ್ತಿದ್ದರೆ, ಆಕೆ ಅದನ್ನೇ ಇನ್ನಷ್ಟು ನಯವಾದ ಮಾತುಗಳಲ್ಲಿ ಹೇಳುತ್ತಿದ್ದಾರೆ.

ಅನೇಕ ಭಾಷಾ-ಸಾಂಸ್ಕೃತಿಕ ಗುಂಪುಗಳಿರುವ ಭಾರತದಲ್ಲಿ ಪ್ರತಿಯೊಂದೂ ಯಾವುದಾದರೊಂದು ರಾಜ್ಯ ಅಥವಾ ಪ್ರದೇಶವನ್ನು ಆಯ್ಕೆ ಮಾಡಿಕೊಂಡು ವಾಸಿಸುವುದು ಮತ್ತು ವಿವಿಧ ಪಕ್ಷ ಅಥವಾ ಸಂಸ್ಥೆಗಳು ಆ ವಿಶಿಷ್ಟ ರಾಜ್ಯ ಅಥವಾ ಪ್ರದೇಶದಲ್ಲಿನ ಜನತೆಯ ವಿಶ್ವಾಸವನ್ನು ಗಳಿಸಿಕೊಳ್ಳುವುದು ಭಾರತದಂಥ ದೇಶದ ಸ್ವಭಾವವೇ ಆಗಿದೆ. ಭಾರತ ಒಂದು ಪ್ರಜಾಪ್ರಭುತ್ವವಾಗಿ ಉಳಿಯಬೇಕಾದರೆ ಈ ವಿವಿಧ ರಾಜ್ಯಗಳಲ್ಲಿ ತಮ್ಮ ಸರ್ಕಾರಗಳನ್ನು ಸ್ಥಾಪಿಸಿಕೊಂಡಿರುವ ಅನೇಕ ಪಕ್ಷಗಳು ಮತ್ತು ಸಂಸ್ಥೆಗಳ ಅಸ್ತಿತ್ವವನ್ನು ಗುರುತಿಸಲೇಬೇಕು.

ಕೇಂದ್ರ ಮತ್ತು ರಾಜ್ಯಗಳು:

ಆದ್ದರಿಂದಲೇ, ಕೇಂದ್ರವು ಬಲಿಷ್ಠವಾಗಿರಬೇಕಾದರೆ, ಸರ್ಕಾರದ ಪ್ರಮುಖ ಕೆಲಸಗಳಾದ ರಕ್ಷಣಾ ಇಲಾಖೆ, ವಿದೇಶಾಂಗ ವ್ಯವಹಾರ, ನಾಣ್ಯ ಚಲಾವಣೆ, ಸಂಪರ್ಕ ಮತ್ತು ಆರ್ಥಿಕ ಅಭಿವೃದ್ಧಿಯ ಸಾಮಾನ್ಯ ಸಮನ್ವಯ ಮುಂತಾದುವನ್ನು ವಹಿಸಿಕೊಂಡು ಮಿಕ್ಕಿದ್ದನ್ನು ರಾಜ್ಯಗಳಿಗೆ ಬಿಡಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಇತರ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಸಲಹೆ ಮಾಡಿದ್ದವು. ಕೇಂದ್ರ ಮತ್ತು ರಾಜ್ಯಗಳು ತಮ್ಮ ಕರ್ತವ್ಯಗಳನ್ನು ಚೆನ್ನಾಗಿ ನಿರ್ವಹಿಸಿ ಸಂಪೂರ್ಣ ಸಹ

ಕಾರದಲ್ಲಿದ್ದಾಗ ಮಾತ್ರ ಭಾರತದ ಜನತೆಯು ಐಕ್ಯತೆ, ಒಗ್ಗಟ್ಟು ಮತ್ತು ಬಲಗಳನ್ನು ಸಾಧಿಸಬಹುದು. ರಾಜ್ಯಗಳ ಹಕ್ಕುಗಳನ್ನು ಕುಂಠಿತಗೊಳಿಸುವ ಪ್ರಯತ್ನ ಮಾಡಿದರೆ ಕೇಂದ್ರ ತಾನಾಗಿಯೇ ದುರ್ಬಲಗೊಳ್ಳುತ್ತದೆ. ನಾಗಾಲ್ಯಾಂಡ್, ಮಿಜೋರಾಮ್ ಮತ್ತು ಈಗ ಇಡೀ ಈಶಾನ್ಯ ಪ್ರದೇಶಗಳು ಕೊಟ್ಟ ಪಾಠ ಇದೇ.

ಆಡಳಿತ ಪಕ್ಷವಾದ ಕಾಂಗ್ರೆಸ್ (ಐ) ಬಲಿಷ್ಠ ಕೇಂದ್ರ ಸರ್ಕಾರದ ಮಾತು ಆಡುತ್ತಾ ದೇಶದ ಒಗ್ಗಟನ್ನು ದುರ್ಬಲಗೊಳಿಸುವ ಕೆಲಸ ಮಾಡುತ್ತಿರುವಂತೆಯೇ, "ಬಲಿಷ್ಠ ಕೇಂದ್ರ"ದ ಉಗ್ರ ಪ್ರತಿಪಾದಕವಾದ ಇನ್ನೊಂದು ರಾಜಕೀಯ ಶಕ್ತಿಯೂ ಅಸ್ಸಾಂನ ಕೆಟ್ಟ ಶಕ್ತಿಗಳಿಗೆ ತಡೆಯಿಲ್ಲದ ಬೆಂಬಲ ಕೊಡುತ್ತಿದೆ. ಅಸ್ಸಾಂನ ಅಂಥ ಹೋರಾಟಗಾರರ ವಿಪರೀತದ ಬೇಡಿಕೆಗೆ ತನ್ನ ಮುಖಪತ್ರಿಕೆಯಾದ "ಆರ್ಗನೈಸರ್" ಮೂಲಕ ಬೆಂಬಲಕೊಡುತ್ತಿರುವ ಆರೆಸ್ಸೆಸ್‌ಗೆ ಈ ಮಾತು ಸಂಬಂಧಿಸಿದೆ. ಭಾರತದ ಸಾಮಾನ್ಯ ಪೌರತ್ವದ ಕಲ್ಪನೆಗೆ ವಿರೋಧವಾದುದೆಂಬುದನ್ನು ಮರೆತು, ಹೋರಾಟಗಾರರ ಬೇಡಿಕೆಗಳು ("ಅಸ್ಸಾಂ ಅಸ್ಸಾಮೀಯರಿಗೆ" ಎಂಬ ಘೋಷಣೆ) ನ್ಯಾಯಬದ್ಧ ಎಂದು ಅಟಲ್ ಬಿಹಾರಿ ವಾಜಪೇಯಿಯಂಥ ಜನಸಂಘದ ವಕ್ತಾರರು ಹೇಳುತ್ತಿದ್ದಾರೆ.

ವಿನಾಶದ ಅತಿಕೆಟ್ಟ ರೂಪಗಳು:

"ಬಲಿಷ್ಠ ಕೇಂದ್ರ" ಮುಂತಾದ ಘೋಷಣೆಗಳು ರಾಷ್ಟ್ರೀಯ ವಿನಾಶದ ಅತಿಕೆಟ್ಟ ರೂಪಗಳಿಗೆ ಪ್ರೋತ್ಸಾಹ ನೀಡಬಹುದು ಮತ್ತು ನೀಡುತ್ತಿವೆ ಎಂಬುದು ಸ್ಪಷ್ಟವಾಗಿದೆ. ಅಸ್ಸಾಮಿನ ಜನತೆಯ ಬವಣೆಗಳಲ್ಲಿ ಕೆಲವು ನೈಜವಾದುವು ಮತ್ತು ಈ ಬವಣೆಗಳನ್ನು ಎಚ್ಚರಿಕೆಯಿಂದ ನಿವಾರಿಸುವುದು ಅಗತ್ಯ ಎಂಬುದರ ಬಗ್ಗೆ ನಮ್ಮ ನಿಲುವನ್ನು ಅಪಾರ್ಥ ಮಾಡಿಕೊಂಡು ಅಪವ್ಯಾಖ್ಯಾನಗೊಳಿಸುವುದು ಬೇಡ. ಭಾರತದ ವಿಭಜನೆ ಮತ್ತು ಬಾಂಗ್ಲಾ ದೇಶ ವಿಮೋಚನೆ ಮುಂತಾದುವುಗಳಿಂದ ಭಾರತೀಯರಲ್ಲದ ಅನೇಕ ಮಂದಿ ಬಂದಿರುವುದು ಅಸ್ಸಾಂ ಜೊತೆಗೆ ತ್ರಿಪುರ, ಪ. ಬಂಗಾಳ, ಮೇಘಾಲಯ ಮುಂತಾದ ರಾಜ್ಯಗಳಿಗೂ ಸಮಸ್ಯೆಯಾಗಿದೆ. ಆದರೆ ಅಸ್ಸಾಂ ಮೇಘಾಲಯಗಳ ಈ ಸಮಸ್ಯೆಗಳ ಪರಿಹಾರದ ಹೆಸರಿನಲ್ಲಿ ಈಗ ಮಾಡಲೆತ್ನಿಸಿರುವುದು, ಭಾರತೀಯ ಪೌರತ್ವದ ಅಸ್ತಿತ್ವವನ್ನೇ ಇಲ್ಲದಂತೆ ಮಾಡುವ ಪ್ರಯತ್ನವಾಗಿದೆ.

ಇಲ್ಲಿಯೇ ಆಡಳಿತ ಪಕ್ಷಗಳು ಮತ್ತು ಎಡ ಶಕ್ತಿಗಳ ನಡುವೆ ಕಾರ್ಯನೀತಿಯ ಘರ್ಷಣೆ ಇರುವುದು. "ಒಂದು ಒಗ್ಗೂಡಿದ ಮತ್ತು ಬಲಿಷ್ಠ ಕೇಂದ್ರ"ದ ಘೋಷಣೆಯ ಆಧಾರದ ಮೇಲೆ ಹೇಳಿದರೂ ಮೊದಲನೆಯದರ ಕಾರ್ಯನೀತಿ ರಾಷ್ಟ್ರೀಯ ಅನೈಕ್ಯತೆಯನ್ನು ತರುತ್ತದೆ. ಎರಡನೆಯ ಕಾರ್ಯನೀತಿಯು ರಾಜ್ಯಗಳ ಸ್ವಾಯತ್ತತೆಯನ್ನು ಆಧರಿಸಿ, ರಾಷ್ಟ್ರೀಯ ಒಗ್ಗಟ್ಟು ಮತ್ತು ಐಕ್ಯತೆಯನ್ನು ಸಾಧಿಸುವತ್ತ ಉದ್ದೇಶಿತವಾಗಿದೆ

ಇದನ್ನು ಕೊನೆಗೊಳಿಸುವ ಮೊದಲು, ರಾಷ್ಟ್ರೀಯ ಐಕ್ಯತೆಯ ಇನ್ನಿತರ ಅಂಶಗಳ ಬಗ್ಗೆ ಚರ್ಚಿಸಬಹುದು.

ಮತೀಯತೆ ಮತ್ತು ಜಾತೀಯತೆ:

* ರಾಜ್ಯ, ವ್ಯವಸ್ಥೆ ಮತ್ತು ಸರ್ಕಾರಗಳು ಧರ್ಮದಿಂದ ಸಂಪೂರ್ಣವಾಗಿ ದೂರವಿರುವ ನೀತಿಯನ್ನು ಖಡಾಖಂಡಿತವಾಗಿ ಪಾಲಿಸಿದರೆ ಮತೀಯತೆಯ ಸಮಸ್ಯೆಯನ್ನು ಪರಿಹರಿಸಬಹುದು. ರಾಜ್ಯವ್ಯವಸ್ಥೆ ಮತ್ತು ಸರ್ಕಾರಗಳ ಮಧ್ಯಪ್ರವೇಶವಿಲ್ಲದೆ ತಮ್ಮ ಧಾರ್ಮಿಕ ಶ್ರದ್ಧೆಯನ್ನು ಬೋಧಿಸಿ ಆಚರಿಸಲು ಧಾರ್ಮಿಕ ಸಂಸ್ಥೆಗಳು ಮತ್ತು ಅವುಗಳ ನಾಯಕರಿಗೆ ಹಕ್ಕು ಇದೆ. ರಾಜ್ಯದ ಮತ್ತು ಸರ್ಕಾರದ ವ್ಯವಹಾರಗಳಲ್ಲಿ ಧಾರ್ಮಿಕ ಅಧಿಕಾರಿಗಳೂ ತಲೆಹಾಕಬಾರದು.

ಆದರೆ ದುರಾದೃಷ್ಟದಿಂದ, ಧರ್ಮವನ್ನು ತಮ್ಮ ಹಿತಾಸಕ್ತಿಗಳಿಗಾಗಿ ರಾಜಕೀಯ ಪಕ್ಷಗಳು ಬಳಸಿಕೊಳ್ಳುತ್ತಿವೆ. ಪ್ರಧಾನ ಮಂತ್ರಿಯವರು ಬಹಿರಂಗವಾಗಿ ದೇವಾಲಯಗಳಿಗೆ ಹೋಗುವುದು ಮತ್ತು ಇತರ ಹಿಂದೂ ಅಲ್ಲದ ಧಾರ್ಮಿಕ ನಂಬಿಕೆಗಳಿಗೆ ತಮ್ಮ ಬೆಲೆ ಕೊಡುವುದು ಇವುಗಳು ಆ ಉದ್ದೇಶವನ್ನು ತೋರಿಸುತ್ತವೆ. ವಿನೋಬಭಾವೆಯವರು ಎತ್ತಿದ ಗೋವಧೆ ನಿಷೇಧದ ಬಗ್ಗೆ ಅನೇಕ ರಾಜಕೀಯ ಪಕ್ಷಗಳ ನಾಯಕರು ಸಾರ್ವಜನಿಕವಾಗಿ ಬೆಂಬಲ ಕೊಟ್ಟದ್ದನ್ನು ಇಲ್ಲಿ ಸ್ಮರಿಸಬಹುದು.

* ಜಾತಿ ದಬ್ಬಾಳಿಕೆಯು ಶತಮಾನಗಟ್ಟಲೆ ಹಳೆಯದಾದ ವ್ಯವಸ್ಥೆಯ ಚಾರಿತ್ರಿಕ ಹಿನ್ನೆಲೆಯಲ್ಲಿ ಜಾತಿವಾದ ಹುಟ್ಟಿಕೊಂಡಿದೆ. ಕೆಳವರ್ಗದ ಜಾತಿಗಳು ಎಚ್ಚೆತ್ತು ದಬ್ಬಾಳಿಕೆಯ ವಿರುದ್ಧ ಹೋರಾಡುತ್ತಿರುವುದು ಸದ್ಯದ ಪರಿಸ್ಥಿತಿಯಲ್ಲಿ ಆರೋಗ್ಯಕರವಾದ ಲಕ್ಷಣವಾಗಿದೆ. ಸರ್ಕಾರಿ ಸೇವೆಯಲ್ಲಿ ಮೀಸಲಾತಿ ಮುಂತಾದ ಅವರ ಬೇಡಿಕೆಗಳೂ ಸಮರ್ಥನೀಯವಾದುದು. ಸಮಸ್ಯೆಯ ಶಾಶ್ವತ ಪರಿಹಾರವೆಂದರೆ ಜಾತಿಗಳ ನಿರ್ಮೂಲನ, ವಿವಿಧ ಜಾತಿಗಳಿಗೆ ಸೇರಿದ ಗಂಡಸರು ಹೆಂಗಸರು ಪರಸ್ಪರ ಬೆರೆಯುವುದು ಮತ್ತು ಅಂತರ ಜಾತಿ ವಿವಾಹಗಳು ಇದಕ್ಕೆ ಸಹಾಯ ಮಾಡುತ್ತವೆ. ಜಾತಿ ಅಸಮಾನತೆಯ ನಿರ್ಮೂಲನದ ಮುಖ್ಯ ದಾರಿ ಎಂದರೆ ವಿವಿಧ ಜಾತಿ, ಪಂಗಡಗಳಿಗೆ ಸೇರಿದ ದುಡಿಯುವ ಜನತೆಯು (ಕೈಗಾರಿಕಾ ಮತ್ತು ಕೃಷಿ ಕಾರ್ಮಿಕರು, ರೈತರು ಮತ್ತು ಸಣ್ಣ ಆಸ್ತಿದಾರರು, ಮಧ್ಯಮವರ್ಗದ ನೌಕರರು ಇತ್ಯಾದಿ) ಹೂಡುವ ಹೋರಾಟಗಳಲ್ಲಿ ಅನುಭವಿಸುವ ಕಷ್ಟಗಳು, ಈ ಕಷ್ಟನೋವುಗಳು ಅವರನ್ನು ದುಡಿಯುವ ಮತ್ತು ಹೋರಾಡುವ ಜನತೆಯ ಒಂದು ಪಂಗಡವಾಗಿ ರೂಪಿಸುತ್ತವೆ. ದಬ್ಬಾಳಿಕೆಗೊಳಗಾದ ಜಾತಿಗಳ ಹಕ್ಕುಗಳಿಗಾಗಿ ಹೋರಾಡುವ ಅನೇಕರು ವಿವಿಧ ಜಾತಿಗಳಿಗೆ ಸೇರಿದ ದುಡಿಯುವ ಜನತೆಯನ್ನು ಪ್ರತ್ಯೇಕಿಸಿ ಆ ಮೂಲಕ ಅಪ್ರಜ್ಞಾಪೂರ್ವಕವಾಗಿ ಶೋಷಕರಿಗೆ ಸಹಾಯ ಮಾಡುತ್ತಾರೆ ದಬ್ಬಾಳಿಕೆಗೊಳಗಾದ ಜಾತಿಗಳ ಹಿತಾಸಕ್ತಿಗೆಂದು ಹುಟ್ಟಿಕೊಳ್ಳುವ ಅನೇಕ ಚಳುವಳಿಗಳ ಫಲಿತಾಂಶ ಇದೇ ಆಗಿರುತ್ತದೆ.

ಭಾಷಾಸಮಸ್ಯೆ:

ಭಾಷಾ ಪ್ರಶ್ನೆಗೆ ಬಂದರೆ, ವಿವಿಧ ಭಾಷಾ-ಸಾಂಸ್ಕೃತಿಕ ಗುಂಪುಗಳ ಐಕ್ಯತೆ ಮತ್ತು ಒಗ್ಗಟ್ಟು ಮೂಡಬೇಕಾದರೆ, ಎಲ್ಲ ಭಾರತೀಯ ಭಾಷೆಗಳಿಗೂ ಸಂಪೂರ್ಣ ಸಮಾನತೆ ಇದ್ದು, ಯಾವೊಂದು ಭಾಷೆಯನ್ನೂ (ಇಂಗ್ಲಿಷ್ ಅಥವಾ ಹಿಂದಿ) ಮೇಲ್ಪಟ್ಟಕ್ಕೇರಿಸುವ ಪ್ರಯತ್ನ ಇರಬಾರದು. ಇತರ ಭಾಷೆಗಳನ್ನಾಡುವ ಜನರ ಮೇಲೆ ಒಂದು ಭಾಷೆಯನ್ನು ಹೇರದೆ ಇದ್ದರೆ, ಭಾರತದ ವಿವಿಧ ಜನತೆ ಒಂದಾಗಿ ಪರಸ್ಪರ ಬೆರೆತು, ಸಂಪರ್ಕ ಭಾಷೆಯೊಂದು ಬೆಳೆದೇ ಬೆಳೆಯುತ್ತದೆಯೇ ಹೊರತು. ಸಂಪರ್ಕ ಭಾಷೆಯ ಬೆಳವಣಿಗೆಗೆ ಅಡ್ಡಿಯಾಗುವುದಿಲ್ಲ. ಯಾವ ಭಾಷಾ ಗುಂಪುಗಳನ್ನೂ ಪ್ರತ್ಯೇಕಿಸುವುದಿಲ್ಲವೆಂದು ಗ್ಯಾರಂಟಿ ಕೊಟ್ಟಾಗ ಮಾತ್ರ ಒಂದು ಸಂಪರ್ಕ ಭಾಷೆ ಬೆಳೆಯಬಹುದು. ಆದರೆ ದುರಾದೃಷ್ಟದಿಂದ ಸಂಪರ್ಕಭಾಷೆ ಬೆಳೆಯಲೆಂಬ ನೆಪದಲ್ಲಿ ಒಂದು ಭಾಷೆಯನ್ನು ಇತರರ ಮೇಲೆ ಹೇರುವ ಅಥವಾ ಇಡೀ ದೇಶಕ್ಕೆ ಒಂದು ಸಂಪರ್ಕ ಭಾಷೆಯನ್ನು ರೂಪಿಸಲೋಸುಗ ಸ್ವತಂತ್ರವಾಗಿ ಮತ್ತು ಸ್ವಂತ ಇಚ್ಛೆಯಿಂದ ಜನತೆ ಬೆರೆಯುವ ಅಗತ್ಯವನ್ನು ಕಡೆಗಣಿಸುವ ಪ್ರವೃತ್ತಿಯೇ ಹೆಚ್ಚಾಗಿದೆ.

ಭಾರತದ ಐಕ್ಯತೆ ಮತ್ತು ಒಗ್ಗಟ್ಟು ಒಂದು ವಾಸ್ತವತೆಯಾಗಬೇಕಾದರೆ ಅಗತ್ಯವಿರುವ ಸರಿಯಾದ ನೀತಿಗಳಿಗಾಗಿ ಹೋರಾಡಲು ವಾಮ ಚಳುವಳಿಯ ನಮ್ಮಂಥವರಿಗೆ ಸಹಾಯ ಮಾಡುವ ಕೆಲವು ಮುಖ್ಯ ಆಲೋಚನೆಗಳು ಮೇಲೆ ಹೇಳದಂತೆ ಇವೇ.

○

ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಪೂರೈಕೆಯ ಖಂಡನೆ

ಕರ್ನಾಟಕ ಶಾಂತಿ ಮತ್ತು ಐಕ್ಯಮತ್ಯ ಸಮಿತಿಯು ಬೆಂಗಳೂರಿನಲ್ಲಿ 16ರಂದು ಬಹಿರಂಗ ಸಭೆ ನಡೆಸಿ, ಆಫ್‌ಘಾನಿಸ್ತಾನದ ವಿರುದ್ಧ ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ನೀಡುತ್ತಿರುವ ಅಮೆರಿಕದ ಕ್ರಮವನ್ನು ಪ್ರತಿಭಟಿಸಿತು. ಆಫ್‌ಘಾನಿಸ್ತಾನದಲ್ಲಿ ನಡೆದ ಕ್ರಾಂತಿಯ ಸಂರಕ್ಷಣೆಗಾಗಿ ರಷ್ಯವಿತ್ತ ಸಹಾಯವನ್ನು ಸಭೆ ಸ್ವಾಗತಿಸಿತು. ಕ್ರಾಂತಿಕಾರಿ ಸರ್ಕಾರದ ಬೇಡಿಕೆಯ ಮೇರೆಗೆ ರಷ್ಯವಿತ್ತ ಸಹಾಯವನ್ನು "ರಷ್ಯನ್ ಆಕ್ರಮಣ" ಎಂದು ಅಪಪ್ರಚಾರ ನಡೆಸುವ ಸಾಮ್ರಾಜ್ಯಶಾಹಿ ಬೆಂಬಲಿಗರ ಪೊಳ್ಳುಪ್ರಚಾರವನ್ನು ಮಾರ್ಕ್ಸ್‌ವಾದಿ ಮುಖಂಡ ಕಾಂ. ಎನ್. ಎಲ್. ಉಪಾಧ್ಯಾಯರು ಬಯಲಿಗೆಳೆದು, ರಷ್ಯದ ಧೋರಣೆಯನ್ನು ಸಮರ್ಥಿಸಿದರು.

○

ಸಂಸತ್ತಿನಲ್ಲಿ ಎಡಪಕ್ಷಗಳ ಕಾರ್ಯಾಚರಣೆ ನೀತಿ

ಮಾರ್ಚಿ ಹನ್ನೊಂದರಿಂದ ಆರಂಭವಾಗುವ ಸಂಸತ್ ಅಧಿವೇಶನದಲ್ಲಿ ಮಂಡಿತವಾಗಲಿರುವ ವಿಷಯಗಳ ಬಗ್ಗೆ ಚರ್ಚೆ ನಡೆಸಲು ಸಂಸತ್ತಿನ ಪಕ್ಷಗಳ ಸಮನ್ವಯ ಸಮಿತಿಯ ಸಭೆ ಸೇರಿತ್ತು. ಈ ಸಭೆಯಲ್ಲಿ ಸಮರ್ ಮುಖರ್ಜಿ, ಪಿ. ರಾಮಮೂರ್ತಿ ಮತ್ತು ಹರಿಕಿಷನ್ ಸಿಂಗ್ ಸುರ್ಜಿತ್ (ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ) ಭೂಪೇಶ್ ಗುಪ್ತ, ಇಂದ್ರಜೀತ್ ಗುಪ್ತ ಮತ್ತು ರಾಮಾವತಾರ್ ಶಾಸ್ತ್ರಿ (ಭಾರತ ಕಮ್ಯುನಿಸ್ಟ್ ಪಕ್ಷ) ತ್ರಿದಿಬ್ ಚೌಧುರಿ (ಆರ್.ಎಸ್.ಪಿ.) ಮತ್ತು ಚಿತ್ತ ಬಸು (ಫಾರ್ವರ್ಡ್ ಬ್ಲಾಕ್) ಹಾಜರಿದ್ದರು.

ವಿಸರ್ಜಿತ ಒಂಬತ್ತು ರಾಜ್ಯಗಳ ಮತದಾರ ಪಟ್ಟಿಯ ಪರಿಷ್ಕರಣದಲ್ಲಿ ಮತದಾರರ ಪಟ್ಟಿ ತಯಾರಿಕೆಯಲ್ಲಿ ಸಾಮಾನ್ಯವಾಗಿ ಅನುಸರಿಸಲಾಗುವ ವಿಧಿವಿಧಾನಗಳನ್ನು ಕಣ್ಮರೆಸುವ ಕೇಂದ್ರದ ಕ್ರಮವನ್ನು ಸಭೆ ತೀವ್ರವಾಗಿ ಖಂಡಿಸಿತು. ಏಕೆಂದರೆ ಈ ರಾಜ್ಯಗಳ ಲಕ್ಷಾಂತರ ಮತದಾರರಿಗೆ ಇದರಿಂದ ಅನ್ಯಾಯವಾಗುತ್ತದೆ. ಈ ಬಗ್ಗೆ ಎಡ ಪಕ್ಷಗಳ ನಿಯೋಗವೊಂದು ಚುನಾವಣಾ ಮುಖ್ಯಾಧಿಕಾರಿಗಳನ್ನು ಭೇಟಿ ಮಾಡಬೇಕೆಂದು ಸಭೆ ತೀರ್ಮಾನಿಸಿತು.

ವಿಧಾನಸಭೆ ವಿಸರ್ಜನೆ ಕ್ರಮಕ್ಕೆ ರಾಜ್ಯಸಭೆಯಲ್ಲಿ ಅಂಗೀಕಾರ ಪಡೆಯಲೋಸುಗ ಆಡಳಿತ ಪಕ್ಷವು ಪ್ರೇರೇಪಿಸುತ್ತಿರುವ ಪಕ್ಷಾಂತರಗಳನ್ನು ಸಭೆ ಖಂಡಿಸಿತು. ಚುನಾವಣೆಯಲ್ಲಿ ಆಡಳಿತ ಯಂತ್ರವು ನಿಷ್ಪಕ್ಷಪಾತದಿಂದ ಕೆಲಸ ನಿರ್ವಹಿಸಲು ಸಾಧ್ಯವಾಗುವಂತೆ ಮಾಡಲಾಗುವುದು ಎಂದು ಮುಖ್ಯ ಚುನಾವಣಾಧಿಕಾರಿಗಳು ಭರವಸೆ ನೀಡಿದ್ದರೂ ಈಗ ಆ ರಾಜ್ಯಗಳಲ್ಲಿ ಅಗಾಧವಾಗಿ ನಡೆಯುತ್ತಿರುವ ಅಧಿಕಾರಿಗಳ ವರ್ಗಾವರ್ಗಿಯ ಬಗ್ಗೆ ಸಭೆ ತೀವ್ರ ಗಮನ ಕೊಟ್ಟಿತು.

ಅಗತ್ಯ ವಸ್ತುಗಳ ಬೆಲೆ ಏರಿಕೆ, ಅದರಲ್ಲೂ ಸಕ್ಕರೆ, ಖಾದ್ಯ ತೈಲಗಳು, ಆಹಾರ ಧಾನ್ಯಗಳು, ಸೀಮೆ ಎಣ್ಣೆ ಮತ್ತು ಡೀಸೆಲ್‌ಗಳ ಬೆಲೆ ಏರಿಕೆ, ವಿವಿಧ ರಾಜ್ಯಗಳಲ್ಲಿ ಹರಿಜನರ ಮೇಲೆ ಆಕ್ರಮಣ, ಹನ್ಸಿ, ಹಿಸ್ಸಾರ್‌ಗಳಲ್ಲಿ ಕಾರ್ಮಿಕರ ದಮನ, ಮಹಿಳೆಯರ ಮೇಲೆ ಅತ್ಯಾಚಾರಗಳು, ಅಸ್ಸಾಂನ ನಿರಂತರ ಬಿಕ್ಕಟ್ಟು ಮತ್ತು ಅದಕ್ಕೆ ಪರಿಹಾರ ಕಂಡುಹಿಡಿಯುವುದರಲ್ಲಿ ಸೋಲು, ಆಫ್‌ಗನ್ ಕ್ರಾಂತಿಯ ವಿರುದ್ಧ ಸಾಮ್ರಾಜ್ಯಶಾಹಿ ಪರವಾದಿಗಳು ಮತ್ತು ಪ್ರತಿಗಾಮಿಗಳು ನಡೆಸುತ್ತಿರುವ ಪಿತೂರಿಗಳು. ಕ್ರಮಗಳು,- ಈ ವಿಚಾರಗಳನ್ನು ಸಂಸತ್ತಿನಲ್ಲಿ ಚರ್ಚೆಗಾಗಿ ಎತ್ತಲು ಸಭೆ ತೀರ್ಮಾನಿಸಿತು.

ಕೇಂದ್ರದ ಆದೇಶಗಳನ್ನು ಧಿಕ್ಕರಿಸುವ ರಾಜ್ಯಸರ್ಕಾರಗಳನ್ನು ಬೆದರಿಸುವ ಕೆಲವು ಕೇಂದ್ರ ಸಚಿವರ ಹೇಳಿಕೆಗಳು ಮತ್ತು ಚಟುವಟಿಕೆಗಳ ಬಗ್ಗೆ ಸಭೆ ತನ್ನ ತೀವ್ರ ಆತಂಕ ವ್ಯಕ್ತಪಡಿಸಿತು. ಖಾಸಗಿ ವಲಯವೂ ವಿದ್ಯುತ್ ಕೈಗಾರಿಕೆಯಲ್ಲಿ ಪ್ರವೇಶಿಸಲು ಸಾಧ್ಯವಾಗುವಂತೆ ಮಾಡುತ್ತೇವೆಂಬ ವಿದ್ಯುಚ್ಛಕ್ತಿ ಮಂತ್ರಿಗಳ ಹೇಳಿಕೆಯು ಸಂಸತ್ ಅಂಗೀಕರಿಸಿದ ಕೈಗಾರಿಕಾ ಮಸೂದೆ ಗೊತ್ತುವಳಿಯ ಉಲ್ಲಂಘನೆಯಾಗಿದೆ ಎಂದು ಸಭೆ ಖಂಡಿಸಿತು.


○

ಗೇಣಿದಾರನ ಬವಣೆ

ದೊಡ್ಡನಾಯಕನ ಕೊಪ್ಪದಲ್ಲಿ ಕಮಲಿನಿಬಾಯಿ, ರಾಮನಾರಾಯಣ ಗೋಪಾಲಗಿರಿ ಅವರ ಗೇಣಿದಾರನಾಗಿರುವ ಫಕೀರಪ್ಪ ತಳವಾಯಿ (ರಾಮಪ್ಪ) ಅವರು ಬಹಳದಿನಗಳಿಂದ ಕಿರುಕುಳ ಅನುಭವಿಸುತ್ತಿದ್ದಾರೆ. ಸರ್ಕಾರದಲ್ಲಿ ಗೇಣಿದಾರನೆಂದು ದಾಖಲೆಮಾಡಿಸಲು ಜಮೀನ್ದಾರರು ಬಿಡುತ್ತಿಲ್ಲ. ಆದರೆ ಪ್ರತಿವರ್ಷ ಗೇಣಿ ಕೊಟ್ಟದ್ದಕ್ಕೆ ಪಡೆದ ರಶೀತಿ ಗೇಣಿದಾರನ ಬಳಿಯಿದೆ. ಭೂಪಂಚಾಯ್ತಿ ಸದಸ್ಯರನ್ನು ವಶಪಡಿಸಿಕೊಂಡಿರುವ ಜಮೀನ್ದಾರರು, ಗೇಣಿದಾರನ ಅರ್ಜಿಯನ್ನು ಕಡೆಗಣಿಸುತ್ತಿದ್ದಾರೆ. ಪೋಲೀಸರಿಂದ ಕುಟುಂಬದವರಿಗೆ ಬೆದರಿಕೆ ಕಿರುಕುಳಗಳು ಬಂದವು. ಕೋರ್ಟು ಸರ್ಕಾರಗಳಿಂದ ನ್ಯಾಯದೊರೆಯುತ್ತಿಲ್ಲ. ಧಾರವಾಡ ಕೃಷಿ ಕಾರ್ಮಿಕರ ಸಂಘ ಭಾರತ ವಿದ್ಯಾರ್ಥಿ ಫೆಡರೇಶನ್, ಕರ್ನಾಟಕ ರೈತ ಸಂಘದ ಧಾರವಾಡ ಶಾಖೆಗಳು ಗೇಣಿದಾರನಿಗೆ ರಕ್ಷಣೆ ನೀಡಬೇಕೆಂದು ಕೋರಿದೆ. ಇಲ್ಲದಿದ್ದರೆ ಹೋರಾಟ ನಡೆಸಲು ತೀರ್ಮಾನಿಸಿವೆ.

●

ಈ ಸಮಸ್ಯೆಗೆ ಪರಿಹಾರ ಒಂದೇ



—WB ICA 609 A 1/80—

ಮಾರುಕಟ್ಟೆಯು ಪ್ರತಿದಿನ ಹೆಚ್ಚುಹೆಚ್ಚು ಉರಿಯುತ್ತಿದೆ (ಕೆರಳುತ್ತಿದೆ). ದೈನಂದಿನ ಅಗತ್ಯಗಳ ಬೆಲೆಏರುತ್ತಿದೆ. ಅನೇಕ ವಸ್ತುಗಳನ್ನು ಕೊಳ್ಳುವಂತೆಯೇ ಇಲ್ಲ. ಇದೆಲ್ಲ ನಮ್ಮ ದಿನನಿತ್ಯದ ಅನುಭವದ ಭಾಗವಾಗಿದೆ. ಈ ಸಮಸ್ಯೆಗೆ ಪರಿಹಾರ ಇಲ್ಲವೆ ?

ಆಹಾರಧಾನ್ಯಗಳು, ಸಕ್ಕರೆ, ಎಣ್ಣೆ, ಸೀಮೆಎಣ್ಣೆ, ಬಟ್ಟೆ ಮುಂತಾದ ಹತ್ತು ಅಗತ್ಯ ವಸ್ತುಗಳನ್ನು ದೇಶದಾದ್ಯಂತ ಕಡಿಮೆ ಬೆಲೆಗೆ ನಿಗದಿಮಾಡಿ ಮಾರಲು ಸಾಧ್ಯವಿಲ್ಲವೆ? ಪಡಿತರ ಅಂಗಡಿಗಳ ಮೂಲಕ ಅವುಗಳನ್ನು ಹಂಚುವುದರ, ಮೂಲಕ ಅವು ಜನಸಾಮಾನ್ಯರ ಕೊಳ್ಳುವ ಶಕ್ತಿಗೆ ನಿಲುಕುವಂತೆ ಮಾಡಲು ಆಗುವುದಿಲ್ಲವೆ? ಹೀಗೆ ಮಾಡಲು ಸಾಧ್ಯ ಎಂದು ನಾವು ಭಾವಿಸುತ್ತೇವೆ. ಕೇಂದ್ರ ಸರ್ಕಾರವು ದೇಶದಾದ್ಯಂತ ಇಂಥ ಕ್ರಮವನ್ನು ಜಾರಿಗೊಳಿಸಬಹುದು. ಈ ವಸ್ತುಗಳನ್ನು ವಿದೇಶಗಳಿಂದ ತರಿಸಿಕೊಳ್ಳಲು ರಾಜ್ಯ ಸರ್ಕಾರಗಳ ಬಳಿ ವಿದೇಶಿ ವಿನಿಮಯ ಇರುವುದಿಲ್ಲ. ಕೇಂದ್ರದ ಅನುಮತಿ ಇಲ್ಲದೆ ನೆರೆರಾಜ್ಯಗಳಿಂದ ಇವುಗಳನ್ನು ತರಿಸಿಕೊಳ್ಳುವಂತೂ ಇಲ್ಲ. ಸಾರಿಗೆ ಮತ್ತು ಸಂಪರ್ಕ ಸಾಧನಗಳು ಸಂಪೂರ್ಣವಾಗಿ ಕೇಂದ್ರದ ಕೈಯಲ್ಲಿಯೇ ಇರುವುದರಿಂದ ಇವುಗಳನ್ನು ಸಂಗ್ರಹಿಸುವುದು ಕೇಂದ್ರದ ಪ್ರಮುಖ ಜವಾಬ್ದಾರಿಯಾಗಿದೆ. ವಿವಿಧ ರಾಜ್ಯಗಳಿಗೆ ವಸ್ತುಗಳನ್ನು ರವಾನಿಸುವ ಕೆಲಸವನ್ನು ಕೇಂದ್ರ ಕೈಗೊಳ್ಳಬೇಕು. ಇಷ್ಟೆಲ್ಲ ಆದ ಮೇಲೆ ತನಗೆ ಶಕ್ತಿಯಿದ್ದಷ್ಟು ಚೆನ್ನಾಗಿ ಕೆಲಸ ನಿರ್ವಹಿಸುವುದು ರಾಜ್ಯ ಸರ್ಕಾರಕ್ಕೆ ಸೇರಿದೆ.

ಪಶ್ಚಿಮ ಬಂಗಾಳ ಸರ್ಕಾರ

ಕಾಂ. ಎ. ಕೆ. ಜಿ. ಯವರ 3ನೇ ವರ್ಧಂತಿ

ದಿನಾಂಕ 22-3-1980 ರಂದು ಬೆಂಗಳೂರಿನಲ್ಲಿ ಕಾಂ. ಎ. ಕೆ. ಗೋಪಾಲನ್‌ರವರ ಮೂರನೇ ವಾರ್ಷಿಕ ವರ್ಧಂತಿಯನ್ನು ನಡೆಸಲಾಯಿತು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿಯು ಏರ್ಪಡಿಸಿದ್ದ ವರ್ಧಂತಿಯ ಬಹಿರಂಗ ಸಭೆ ನಗರದ ದೇವಾಂಗಸಂಘ ಹಾಲ್‌ನಲ್ಲಿ ಜರುಗಿ ಕಾಂ. ಎನ್. ಎಲ್. ಉಪಾಧ್ಯಾಯ ಇದರ ಅಧ್ಯಕ್ಷತೆ ವಹಿಸಿದ್ದರು.

ಸಭೆಯ ಪ್ರಾರಂಭದಲ್ಲಿ ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಕಾಂ. ಜನಾರ್ಧನ್ ಕ್ರಾಂತಿ ಗೀತೆಗಳನ್ನು ಹಾಡಿದರು. ಕಾಂ. ಎ. ಕೆ. ಜಿ. ಯವರ ಸಮಕಾಲೀನರೂ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹಿರಿಯ ಮುಖಂಡರಾದ ಕಾಂ. ಎನ್. ಎಲ್. ಉಪಾಧ್ಯಾಯ ಎ.ಕೆ.ಜಿ.ಯವರು ನಡೆಸಿದ ಹೋರಾಟಗಳ ಮತ್ತು ಅವರ ಜೀವನದ ಸಂಕ್ಷಿಪ್ತ ಪರಿಚಯ ಮಾಡಿದರು. ನಂತರ ಬೆಂಗಳೂರು ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಕಾಂ. ಜಗನ್ನಾಥ್‌ರವರು ಮಾತನಾಡಿ ಕಾಂ. ಎ. ಕೆ. ಜಿ ಯವರು ರೈತ ಸಂಘಟನೆಯ ಪ್ರಾರಂಭದಲ್ಲಿ ಅನುಭವಿಸಿದ ಕಷ್ಟದ ದಿನಗಳನ್ನು ಸ್ಮರಣೆ ಮಾಡುತ್ತಾ ಊಟಕ್ಕಿಲ್ಲದೆ ಸ್ಮಶಾನದಲ್ಲಿ ಕುಂಕುಮ ಬೆರೆಸಿದ ಅನ್ನ ತಿಂದು ಹೋರಾಟ, ಸೆರೆಮನೆ, ಪೋಲೀಸ್ ದಬ್ಬಾಳಿಕೆ ಇವುಗಳಲ್ಲೇ ತಮ್ಮ ಜೀವನವನ್ನು ಮುಗಿಸಿದ ಕಾಂ. ಎ.ಕೆ ಜಿ. ಯವರ ಜೀವನದ ಗುರಿಯನ್ನು ಸಾಧಿಸಲು ಭಾರತ ದೇಶದಲ್ಲಿ ರೈತರ-ಕಾರ್ಮಿಕರ ಅಧಿಕಾರ ಸ್ಥಾಪಿಸಲು ರೈತರ ಸಂಘಟನೆಯನ್ನು ಬಲಗೊಳಿಸಬೇಕಾದ ಅಗತ್ಯವನ್ನು ಒತ್ತಿ ಹೇಳಿದರು. ನಂತರ ಬಿ.ಇ.ಎಲ್. ಕಾರ್ಮಿಕರ ಮುಂದಾಳುವಾಗಿದ್ದ ಕಾಂ. ಎಂ. ಎಸ್. ಸಿ. ರಾವ್‌ರವರು ಮಾತನಾಡಿದರು.

ಕರ್ನಾಟಕದಲ್ಲಿ ಕಾಂ. ಎ. ಕೆ. ಜಿ. ಯವರ ನೆನಪಿಗಾಗಿ 'ಎ. ಕೆ. ಜಿ. ಮೆಮೊರಿಯಲ್ ಟ್ರಸ್ಟ್' ಒಂದನ್ನು ಪ್ರಾರಂಭಿಸುವ ಸಿ.ಪಿ.ಐ.(ಎಂ) ರಾಜ್ಯ ಸಮಿತಿಯ ಯೋಜನೆಯನ್ನು ಸಭೆಗೆ ತಿಳಿಸಿ ಬೆಂಗಳೂರಿನಲ್ಲಿ ಒಂದು ಕಟ್ಟಡ, ಗ್ರಂಥಭಂಡಾರ, ಸಂಶೋಧನಾ ಮತ್ತು ತರಬೇತಿ ಸಂಸ್ಥೆ ಇವುಗಳನ್ನು ಪ್ರಾರಂಭಿಸಲು ಕನಿಷ್ಟ ಆರೇಳು ಲಕ್ಷ ರೂಗಳ ನಿಧಿ ಬೇಕೆಂದು ತಿಳಿಸಿ ಇದಕ್ಕಾಗಿ ಪಾರ್ಟಿಯ ಸದಸ್ಯರು, ಹಿತೈಷಿಗಳು ಮತ್ತು ಸಾರ್ವಜನಿಕರು ಉದಾರವಾಗಿ ಧನ ಸಹಾಯ ಮಾಡಬೇಕೆಂದು ಸಿ.ಪಿ.ಐ.(ಎಂ) ಬೆಂಗಳೂರು ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ. ವಿ.ಜೆ.ಕೆ. ನಾಯರ್ ಮನವಿ ಮಾಡಿಕೊಂಡರು. ಸಭೆಯಲ್ಲಿ ಹಾಜರಿದ್ದ ಕಾರ್ಮಿಕರು ಮತ್ತು ನೌಕರರು ಸುಮಾರು 30 ಸಾವಿರ ರೂಗಳ ಕೊಡುಗೆ ನೀಡುವುದಾಗಿ ಭರವಸೆ ನೀಡಿ ತಮ್ಮ ಹೆಸರುಗಳನ್ನು ದಾಖಲೆ ಮಾಡಿಸಿದರು.

●

ಜನತಾ ಗೃಹ ಹಂಚಿಕೆಯಲ್ಲಿ ಅವ್ಯವಹಾರ

ದ. ಕ. ಜಿಲ್ಲೆ ಪುತ್ತೂರು ತಾಲ್ಲೂಕಿನ ಮೊಟ್ಟೆತಡ್ಕ ಗ್ರಾಮದಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಳಿಯವರು ಕಟ್ಟಿಸಿರುವ ಜನತಾ ಮನೆಗಳು ನಿಜವಾದ ಬಡವರಿಗೆ ಸಿಗದೆ, ಮನೆಗಳನ್ನು ಕಟ್ಟಿದ ಕಂಟ್ರಾಕ್ಟರ್‌ರವರು ಕೆಲವರಿಂದ ಹಣಪಡೆದು ತಮಗೆ ಬೇಕಾದಂತೆ ಹಂಚಿಕೆ ಮಾಡಿದ್ದಾರೆ. ಈ ಕಂಟ್ರಾಕ್ಟರ್ ಪ್ರಭಾವದಿಂದ ಸರಕಾರಿ ಅಧಿಕಾರಿಗಳು ಸಹಾ ನಿಜವಾದ ಬಡವರಿಗೆ, ಈ ಮೊದಲೇ ಅರ್ಜಿ ಹಾಕಿಕೊಂಡಿದ್ದವರಿಗೆ ಮನೆ ಕೊಡಿಸಲು ಹಿಂದೇಟು ಹಾಕುತ್ತಿದ್ದಾರೆ.

ಬಡಜನತೆಯ ಮೇಲೆ ಆಗುತ್ತಿರುವ ಅನ್ಯಾಯವನ್ನು ಪ್ರತಿಭಟಿಸಲು ತಾ. 19-3-80 ರಂದು ತಾಲ್ಲೂಕು ಅಭಿವೃದ್ಧಿ ಮಂಡಳಿಯ ಕಛೇರಿ ಎದುರು ಸತ್ಯಾಗ್ರಹವನ್ನು ಸಿ ಪಿ ಐ. (ಎಂ) ಸ್ಥಳೀಯ ಮುಖಂಡ ಕಾಂ. ಬಿ. ರಾಮಕೃಷ್ಣ ಉದ್ಘಾಟಿಸಿದರು. ಬಡ ಜನರನ್ನು, ಅದರಲ್ಲೂ ಹರಿಜನರನ್ನು ಉದ್ಧಾರ ಮಾಡುವುದಾಗಿ ಹೇಳಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ನಾಯಕತ್ವ, ಜನತಾ ಗೃಹಗಳ ಹಂಚಿಕೆಯಲ್ಲಿ ಆಗಿರುವ ಅನ್ಯಾಯದ ಬಗ್ಗೆ ಮೌನವಾಗಿರುವುದನ್ನು ಖಂಡಿಸಿದ ಕಾಂ. ರಾಮಕೃಷ್ಣರವರು ದುಡಿಯುವ ಜನತೆಯ ವಿಮೋಚನೆಗೆ ಹೋರಾಟ ಒಂದೇ ದಾರಿ ಎಂದರು.

○

ಸೌಹಾರ್ದ ಕಾರ್ಯಾಚರಣೆಗೆ ಬೆಂಗಳೂರಿನ ಕಾರ್ಮಿಕ ಸಂಘಗಳ ಕರೆ

ಇಂಡಿಯನ್ ಟೊಬ್ಯಾಕೋ ಕಂಪೆನಿಗೆ ಸೇರಿದ ಬೆಂಗಳೂರಿನ ಸಿಗರೇಟು ಫ್ಯಾಕ್ಟರಿಯ ಕಾರ್ಮಿಕರ ಹೋರಾಟ, ಬೆಂಗಳೂರು ಬ್ರೂಯರಿಸ್ ಕಾರ್ಮಿಕರ ಹೋರಾಟ, ತಾತಗುಣಿ ಎಸ್ಟೇಟ್ ಕಾರ್ಮಿಕರ ಹೋರಾಟ, ಬೆಂಗಳೂರಿನ "ಸಂಯುಕ್ತ ಕರ್ನಾಟಕ" ದಿನಪತ್ರಿಕೆಯ ಹೋರಾಟಗಳಿಗೆ ಬೆಂಬಲಕೊಡಲು, ಅವರ ಬೇಡಿಕೆಗಳನ್ನು ತಡಮಾಡದೇ ಈಡೇರಿಸಬೇಕೆಂದೂ, ವಿವಾದಗಳನ್ನು ಇತ್ಯರ್ಥಪಡಿಸಬೇಕೆಂದು ಮಾಲೀಕರನ್ನು ಮತ್ತು ಸರ್ಕಾರವನ್ನು ಒತ್ತಾಯಪಡಿಸಲು ಮಾರ್ಚ್ 31 ರಂದು ಎಲ್ಲಾ ಕಾರ್ಖಾನೆಗಳ ಮುಂದೆ, ಕಛೇರಿಗಳ ಮುಂದೆ ಗೇಟ್ ಮೀಟಿಂಗ್ ನಡೆಸಬೇಕೆಂದು, ಏಪ್ರಿಲ್ 3 ರಂದು ವಿಧಾನಸೌಧದ ಮುಂದೆ ಪ್ರದರ್ಶನ ನಡೆಸಬೇಕೆಂದು, ತಾ. 25-3-1980 ರಂದು ಬೆಂಗಳೂರಿನಲ್ಲಿ ನಡೆದ ಕಾರ್ಮಿಕ ಸಂಘಗಳ ಪ್ರತಿನಿಧಿಗಳ ಸಭೆ ಬೆಂಗಳೂರಿನ ಕಾರ್ಮಿಕ ವರ್ಗಕ್ಕೆ ಕರೆಕೊಟ್ಟಿದೆ.

ಮೈಕೇಲ್ ಫರ್ನಾಂಡಿಸ್ ಅಧ್ಯಕ್ಷತೆ ವಹಿಸಿದ್ದ ಈ ಸಭೆಯಲ್ಲಿ ಎಚ್. ಎಂ. ಎಸ್.ನ ಡಿ. ರಾಜಗೋಪಾಲ್, ಎ. ಐ. ಟಿ. ಯು. ಸಿ. ಯ ಶ್ಯಾಮಸುಂದರ್, ಸಿ. ಐ. ಟಿ. ಯು. ವಿನ ಎಸ್. ಸೂರ್ಯನಾರಾಯಣರಾವ್, ಎನ್. ಎಲ್. ಉಪಾಧ್ಯಾಯ, ಟಿ. ಎಸ್. ಅನಂತರಾವ್ ಮತ್ತು ಇತರ ಕಾರ್ಮಿಕ ಸಂಘಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

○

ಸಿ. ಐ. ಟಿ. ಯು. ಸಮ್ಮೇಳನದ ತಯ್ಯಾರಿ ಸಭೆ

ಏಪ್ರಿಲ್ 7, 8 ಮತ್ತು 9 ರಂದು ಮಂಗಳೂರಿನಲ್ಲಿ ನಡೆಯುವ ದಕ್ಷಿಣ ಕನ್ನಡ ಜಿಲ್ಲಾ ಸಿ.ಐ.ಟಿ.ಯು.ಸಮ್ಮೇಳನದ ಪ್ರಚಾರದ ಅಂಗವಾಗಿ ಮಂಗಳೂರಿನ ಕುಪ್ಪೆ ಪದವಿನಲ್ಲಿ ಸಾರ್ವಜನಿಕ ಸಭೆಯೊಂದು ತಾ 22.3.80 ರಂದು ಶ್ರೀ ಮಾರಪ್ಪ ಕೊಟ್ಟಾರಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಕೋಟೆಕಾರ್ ಸರ್ಕಲ್ ಬೀಡಿ ಲೇಬರ್ ಯೂನಿಯನಿನ ಕಾರ್ಯದರ್ಶಿ ಯು.ಬಿ. ಲೋಕಯ್ಯ ಹಾಗೂ ಗುರುಪುರ ಸುರತ್ಕಲ್ ಪ್ರದೇಶ ಬೀಡಿ ಲೇಬರ್ ಯೂನಿಯನಿನ ಕಾರ್ಯದರ್ಶಿ ಶ್ರೀ ಎಂ. ಹೊನ್ನಯ್ಯ ಸಮ್ಮೇಳನದ ಬಗ್ಗೆ ವಿವರಿಸಿ ಜಿಲ್ಲೆಯ ಕಾರ್ಮಿಕರನ್ನು ಭಾದಿಸುವ ಸಮಸ್ಯೆಗಳಿಗೆ ತಕ್ಕ ನಿರ್ಣಯವನ್ನು ಕೈಕೊಳ್ಳುವ ಸಮ್ಮೇಳನವಾಗಿದೆಯೆಂದು ಇದನ್ನು ಯಶಸ್ವಿ ಮಾಡಲು ಎಲ್ಲರೂ ಸಹಾಯ ಸಹಕಾರ ನೀಡಬೇಕೆಂದರು. ಜಿಲ್ಲಾ ಸಿ.ಐ.ಟಿ.ಯು. ಕನ್ವೀನರಾದ ಶ್ರೀ ಕೆ. ಮೂಸಬ್ಬನವರು ಮಾತನಾಡುತ್ತಾ ಸಮ್ಮೇಳನವನ್ನು ಕರೆಯುವ ಅವಶ್ಯಕತೆಯನ್ನು ವಿವರಿಸಿ, ಬೆಲೆಏರಿಕೆ, ನಿತ್ಯೋಪಯೋಗಿ ವಸ್ತುಗಳ ಅಭಾವ, ನಿರುದ್ಯೋಗ ಮೊದಲಾದ ಜಟಿಲ ಸಮಸ್ಯೆಗಳನ್ನು ಎದುರಿಸಬೇಕಾದ ಕಾಲಘಟ್ಟದಲ್ಲಿ ಜಿಲ್ಲೆಯ ಮಜೂರರ ಸಮ್ಮೇಳನ ಕರೆಯಲಾಗಿದೆ. ಈ ಸಮಸ್ಯೆಗಳ ವಿರುದ್ಧ ಹೋರಾಟ ನಡೆಸುವ ಮುಖ್ಯ ಜವಾಬ್ದಾರಿ ಸಂಘಟಿತ ಮಜೂರ ವರ್ಗದ ಮೇಲೆ ಇದೆಯೆಂದು ಇದನ್ನ ಈ ಸಮ್ಮೇಳನವನ್ನ ತೆಗೆದುಕೊಳ್ಳುವ ಮುಖ್ಯ ನಿರ್ಣಯಗಳಲ್ಲಿ ಒಂದಾಗಿದೆ ಎಂದರು. ಸ್ಥಳೀಯ ಬೀಡಿ ಕಂಟ್ರಾಕ್ಟರೊಬ್ಬರು ಬ್ರಾಂಚನ್ನು ಮುಚ್ಚಲು ಕೊಟ್ಟ ನೋಟೀಸಿನ ವಿರುದ್ಧ ಮಾತನಾಡಿ, ಇದಕ್ಕಾಗಿ ಪ್ರತ್ಯಕ್ಷ ಹೋರಾಟ ಕೈಕೊಳ್ಳುವ ನಿರ್ಣಯವನ್ನು ವ್ಯಕ್ತಪಡಿಸಿದರು. ಶ್ರೀ ನೀಲಯನವರು ಸ್ವಾಗತಿಸಿದರು.

○

ತುಮಕೂರು ಜಿಲ್ಲಾ ಸಮಿತಿಯಿಂದ ತರಬೇತಿ ಶಿಬಿರ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ತುಮಕೂರು ಜಿಲ್ಲಾ ಸಮಿತಿಯು ಮಾರ್ಚ್ 9 ಮತ್ತು 10 ರಂದು ಕುಣಿಗಲ್ಲು ತಾಲ್ಲೂಕಿನ ಮಾರ್ಕೋನಹಳ್ಳಿಯಲ್ಲಿ ಪಕ್ಷದ ಕಾರ್ಯಕರ್ತರುಗಳಿಗೆ ಎರಡು ದಿನಗಳ ತರಬೇತಿ ಶಿಬಿರವನ್ನು ನಡೆಸಿತು. ತುಮಕೂರು ಜಿಲ್ಲೆಯ ಶಿರಾ, ತಿಪಟೂರು, ತುಮಕೂರು, ಕುಣಿಗಲ್ಲು ತಾಲ್ಲೂಕುಗಳಿಂದ ಸುಮಾರು 45 ಮಂದಿ ಭಾಗವಹಿಸಿದ್ದ ಈ ಶಿಬಿರದಲ್ಲಿ ಪಕ್ಷದ ರಾಜ್ಯಸಮಿತಿ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್, ಮತ್ತು ರಾಜ್ಯಸಮಿತಿ ಸೆಕ್ರೆಟಾರಿಯೆಟ್ ಸದಸ್ಯ ಕಾಂ. ಪಿ. ರಾಮಚಂದ್ರರಾವ್ ಅವರು ಪಾಠ ಹೇಳಿದರು. ●

ಐ. ಟಿ. ಸಿ. ಕಾರ್ಮಿಕರು ಹೋರಾಟದ ಪಥದಲ್ಲಿ

ಸುಮಾರು 2300 ಕಾರ್ಮಿಕರು ದುಡಿಯುತ್ತಲಿರುವ ಬೆಂಗಳೂರು ನಗರದಲ್ಲಿರುವ ಇಂಡಿಯನ್ ಟೊಬೇಕೊ (I. T. C.) ಕಂಪನಿಯ ಕಾರ್ಮಿಕರು ಯೂನಿಯನ್ನಿನ ಹಳೆಯ ಮುಖಂಡತ್ವ ಮಾಲಕರೊಂದಿಗೆ ಮಾಡಿಕೊಂಡ ಕಾರ್ಮಿಕ ವಿರೋಧಿ ಒಪ್ಪಂದದ ವಿರುದ್ಧ ಹೋರಾಟ ಪ್ರಾರಂಭಿಸಿದೆ. ಹಿಂದೆ ದಿನ ಒಂದರಲ್ಲಿ 230 ಲಕ್ಷ ಸಿಗರೇಟು ಉತ್ಪಾದನೆಯಾಗುವಾಗ 3000 ಮಂದಿ ಕಾರ್ಮಿಕರಿದ್ದರೆ, ಈಗ 400 ಲಕ್ಷ ಸಿಗರೇಟು ಉತ್ಪಾದನೆಯಾಗುವಾಗ ಕಾರ್ಮಿಕರ ಸಂಖ್ಯೆಯು 2300ಕ್ಕೆ ಇಳಿದಿದೆ. ಅಂದರೆ ಕೆಲಸದ ಒತ್ತಡ (ವರ್ಕ್ ಲೋಡ್) ಜಾಸ್ತಿಯಾಗಿದೆ. ಇದಕ್ಕನುಗುಣವಾಗಿ, ಮಾಲಕರಿಗೆ ಅನುಕೂಲವಾಗುವ ಒಪ್ಪಂದ ವಿರೋಧಿಸಲು ಕಾರ್ಮಿಕರು ನಿರ್ಣಯಿಸಿ, ಐವತ್ತು ಮಂದಿಯ ಕ್ರಿಯಾಸಮಿತಿಯನ್ನು ರಚಿಸಿ ಇದಕ್ಕೆ ಕಾಂ. ಎಸ್. ಸೂರ್ಯನಾರಾಯಣರಾವ್ ಇವರನ್ನು ಅಧ್ಯಕ್ಷರನ್ನಾಗಿ ಚುನಾಯಿಸಿಕೊಂಡರು.

17-3-80 ರಂದು ನಗರದ ಕೋಲ್ಸ್ ಪಾರ್ಕಿನಲ್ಲಿ ಸುಮಾರು 1500 ಕಾರ್ಮಿಕರು ಕಾಂ. ಸೂರ್ಯನಾರಾಯಣರಾವ್ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಮಾಲಕರು ರೇಷನ್‌ಲೈಸೇಶನ್, ವರ್ಕ್ ಲೋಡ್, ರಿಟ್ರೆಂಚ್‌ಮೆಂಟ್ ಇವೇ ಮೊದಲಾದ ಕ್ರಮಗಳನ್ನು ಕಾರ್ಮಿಕರ ಮೇಲೆ ಹೇರುವುದನ್ನು ಖಂಡಿಸಿದರು. ಐ. ಟಿ. ಸಿ. ಕಾರ್ಮಿಕ ಮುಂದಾಳುಗಳೂ ಮತ್ತು ಮೈಕೊ ಕಾರಖಾನೆಯ ಕಾಂ. ಎನ್. ವೀರಸ್ವಾಮಿಯವರು ಮಾತನಾಡಿದರು. ಆಮೇಲೆ ಕಾರ್ಮಿಕರು ಬೃಹತ್ ಮೆರವಣಿಗೆಯ ಮೂಲಕ ಲೇಬರ್ ಕಮಿಷನರವರ ಕಛೇರಿಗೆ ತೆರಳಿ, ಅವರನ್ನು ಭೇಟಿಯಾಗಿ ಪರಿಸ್ಥಿತಿಯನ್ನು ವಿವರಿಸಿದರು. ಲೇಬರ್ ಕಮಿಷನರವರು ಕಾರ್ಮಿಕರ ಹೋರಾಟ ಸಮಿತಿ ಮತ್ತು ಮಾಲಕರ ಜಂಟೀ ಸಭೆಯನ್ನು ಈಗಾಗಲೇ ಕರೆದಿರುವರು. ಬೇಡಿಕೆಗಳು ಈಡೇರುವ ತನಕ ಹೋರಾಡಲು ಐ. ಟಿ. ಸಿ. ಕಾರ್ಮಿಕರು ನಿರ್ಣಯಿಸಿದ್ದು, ನಗರದ ಕಾರ್ಮಿಕ ವರ್ಗದ ಬೆಂಬಲವನ್ನು ಕೋರಿರುವರು. ●

ಸಿ. ಐ. ಟಿ. ಯು. ದ್ವಿತೀಯ ಸಮ್ಮೇಳನ

"ಬಹಿರಂಗಸಭೆಯಲ್ಲಿ ಕಾಂ. ಇ. ಕೆ. ನಯನಾರ್"

ಏಪ್ರಿಲ್ 7, 8 ಮತ್ತು 9 ರಂದು ಮಂಗಳೂರಿನಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಸಿ. ಐ. ಟಿ. ಯು. ಕಾರ್ಮಿಕರ ದ್ವಿತೀಯ ಸಮ್ಮೇಳನವು ವಿಜೃಂಭಣೆಯಿಂದ ನಡೆಯಲಿದೆ. ರಾಜ್ಯದ ಸಿ. ಐ. ಟಿ. ಯು. ಅಧ್ಯಕ್ಷ ಕಾಂ. ಎಸ್. ಸೂರ್ಯನಾರಾಯಣರಾಯರು ಸಮ್ಮೇಳನವನ್ನು ಉದ್ಘಾಟಿಸಲಿರುವರು.

ತಾ. 9 ರಂದು ಮಂಗಳೂರಿನ ನೆಹರೂ ಮೈದಾನದಲ್ಲಿ ನಡೆಯುವ ಬಹಿರಂಗ ಅಧಿವೇಶನವನ್ನು ಉದ್ದೇಶಿಸಿ ಕೇರಳದ ಎಡ ಪ್ರಜಾಪ್ರಭುತ್ವ ರಂಗ ಸರಕಾರದ ಮುಖ್ಯಮಂತ್ರಿ ಹಾಗೂ ಕೇರಳ ಜನತೆಯ ಪ್ರೀತಿಯ ಮುಂದಾಳು ಕಾಂ. ಇ. ಕೆ. ನಯನಾರ್ ಮಾತನಾಡಲಿರುವರು.

ಕಾಂ. ಇ. ಕೆ. ನಯನಾರ್ ಇವರು ತಾ. 9 ರಂದು ಬೆಳಗ್ಗೆ 10 ಗಂಟೆಗೆ ತಿರುವಾಂಕೂರು-ಮಂಗಳೂರು ರೈಲಿನಲ್ಲಿ ಮಂಗಳೂರಿಗೆ ಆಗಮಿಸಲಿರುವರು. ಕರ್ನಾಟಕ ರಾಜ್ಯ ಸರಕಾರದ ಅತಿಥಿಯಾಗಿದ್ದು ಕಾಂ. ಇ. ಕೆ. ನಯನಾರ್‌ರವರು ನವ ಮಂಗಳೂರು ಬಂದರನ್ನು ಸಂದರ್ಶಿಸಿ ಅಲ್ಲಿ ಬಂದರಿನ ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡಲಿರುವರು.

●

ಜನತೆಯನ್ನು ಹೋರಾಟಕ್ಕೆ ಅಣಿಗೊಳಿಸಲು ಕೇಂದ್ರ ಸಮಿತಿ ಕರೆ

(ಒಂದನೇ ಪುಟದಿಂದ)

ರನ್ನು ವಜಾಮಾಡಲು ಅಥವಾ ವರ್ಗ ಮಾಡಲು ಕೊಟ್ಟಿರುವ ಸಲಹೆ ಇವೆಲ್ಲವನ್ನು ಕೇಂದ್ರ ಸಮಿತಿ ಪರಿಶೀಲಿಸಿತು.

ತಾವು ಸುಸೂತ್ರವಾದ ಕೇಂದ್ರ-ರಾಜ್ಯ ಸಂಬಂಧಗಳಿಗೆ ಬದ್ಧರೆಂಬುದನ್ನು ಪ. ಬಂಗಾಳ, ಕೇರಳ ಮತ್ತು ತ್ರಿಪುರಾಗಳ ಮುಖ್ಯಮಂತ್ರಿಗಳು ಪದೇ ಪದೇ ಹೇಳಿದ್ದಾರೆ. ರಾಜ್ಯಗಳ ವಲಯಗಳಲ್ಲಿ ನೀತಿಗಳು ಮತ್ತು ಕಾರ್ಯಕ್ರಮಗಳನ್ನು ಜಾರಿಗೊಳಿಸುವಾಗ, ತಮ್ಮ ಚುನಾವಣಾ ಪ್ರತಿಜ್ಞೆಗಳು ಮತ್ತು ಭರವಸೆಗಳನ್ನೂ ತಾವು ಗೌರವಿಸಬೇಕಾಗಿರುವುದಾಗಿಯೂ ಅವರು ಸ್ಪಷ್ಟಪಡಿಸಿದ್ದಾರೆ. ಆದರೆ ಈ ರಾಜ್ಯಗಳ ಸರ್ಕಾರಗಳು ಯಾವ ಪಕ್ಷದ್ದಾದರೂ ಆಗಿರಲಿ, ಎಲ್ಲರೂ ಕಾಂಗ್ರೆಸ್ಸಿನ ನೀತಿಗಳು ಮತ್ತು ಆದೇಶಗಳನ್ನೇ ಪಾಲಿಸಬೇಕು ಎಂದು ಕಾಂಗ್ರೆಸ್ (ಐ) ಮತ್ತು ಅದರ ಸರ್ಕಾರದ ವಕ್ತಾರರು ಪ್ರಚಾರಮಾಡುತ್ತಿದ್ದಾರೆ. ಕೇಂದ್ರ ಮತ್ತು ರಾಜ್ಯಗಳಲ್ಲಿ ವಿವಿಧ ಪಕ್ಷಗಳಿಗೆ ಸೇರಿದ ರಾಜ್ಯಗಳು ಅಸ್ತಿತ್ವದಲ್ಲಿರುವುದು ಭಾರತ ಸಂವಿಧಾನದ ಸ್ವಭಾವವೇ ಆಗಿದೆ. ಈ ವಾಸ್ತವಗಳನ್ನು ಗುರುತಿಸದಿದ್ದರೆ ಮತ್ತು ಕೇಂದ್ರ ಮತ್ತು ರಾಜ್ಯಗಳ ನಡುವೆ ಸರಿಯಾದ ಸಂಬಂಧಗಳು ಇರದಿದ್ದರೆ, ದೇಶದ ಸಂವಿಧಾನ ಮತ್ತು ಅದರ ಪ್ರಜಾಸತ್ತಾತ್ಮಕ ಚೌಕಟ್ಟನ್ನು ರಕ್ಷಿಸಲು ಸಾಧ್ಯವಿಲ್ಲ. ಇದರ ಬದಲು, ಏಕ ಪಕ್ಷೀಯ ಗುತ್ತೇದಾರಿ ಆಳ್ವಿಕೆ ಮತ್ತು ಸರ್ವಾಧಿಕಾರವನ್ನು ತರಲು ಕಾಂಗ್ರೆಸ್ (ಐ) ಯತ್ನಿಸುತ್ತಿದೆ.

ಸರ್ವಾಧಿಕಾರ ವಿರೋಧಿ ಹೋರಾಟ:

ಕಾಂಗ್ರೆಸ್(ಐ) ಮತ್ತು ಅದರ ಕೇಂದ್ರ ಸರ್ಕಾರದ ಸರ್ವಾಧಿಕಾರಿ ಪ್ರವೃತ್ತಿಗಳನ್ನು ವಿರೋಧಿಸಲು ಮತ್ತು ಅದರ ನೀತಿಗಳನ್ನು ಹಿಮ್ಮೆಟ್ಟಿಸುವ ಸಲುವಾಗಿ, ವಿಶಾಲವಾದ ಸಾರ್ವಜನಿಕ ಅಭಿಪ್ರಾಯವನ್ನು ಸಂಘಟಿಸಲು ಬರುವ ಒಂಬತ್ತು ರಾಜ್ಯಗಳ ಚುನಾವಣಾ ಹೋರಾಟವನ್ನು ಒಂದು ಗಂಭೀರ ರಾಜಕೀಯ ಹೋರಾಟವನ್ನಾಗಿ ಪರಿವರ್ತಿಸಲು ತನ್ನ ಶಕ್ತಿಯಿದ್ದಷ್ಟು ಪ್ರಯತ್ನಿಸಲು ಕೇಂದ್ರ ಸಮಿತಿ ನಿರ್ಧರಿಸಿದೆ. ಈ ಸರ್ವಾಧಿಕಾರಿ ಶಕ್ತಿಗಳ ಪ್ರಯತ್ನವನ್ನು ತಡೆಯುವ ಹೋರಾಟದ ತುರ್ತು ಅಗತ್ಯಗಳು ಮತ್ತು ಪಕ್ಷಗಳ ಬಲಾಬಲದ ಆಧಾರದ ಮೇಲೆ ವಿರೋಧ ಪಕ್ಷಗಳ ನಡುವೆ ಚುನಾವಣಾ ಒಪ್ಪಂದ ಮಾಡುವುದು, ದೇಶದ ಸಧ್ಯದ ರಾಜಕೀಯ ವಿದ್ಯಮಾನದಲ್ಲಿ ಅತಿಮುಖ್ಯ ಅಗತ್ಯವಾಗಿದೆ.

ಒಗ್ಗಟ್ಟಿಗಾಗಿ ದುಡಿಯುವ ಪ್ರತಿಜ್ಞೆ:

ಈ ಸಂದರ್ಭದಲ್ಲಿ, ದ್ವಿಸದಸ್ಯತ್ವದ ಮೇಲಿನ ಕೊನೆಯಿಲ್ಲದ ಜಗಳ ಒಂದು ಕಡೆ ಮತ್ತು ಇನ್ನೊಂದು ಕಡೆ ಆರೆಸ್ಸೆಸ್‌ನ ಉನ್ನತ ನಾಯಕರಿಂದ ಕಾಂಗ್ರೆಸ್ ಸರ್ವಾಧಿಕಾರಕ್ಕೆ ಬೆಂಬಲ ಹೀಗೆ ಇಬ್ಬಗೆಯಿಂದ ಜನತಾಪಕ್ಷವನ್ನು ಛೇದಿಸುತ್ತಿರುವ ಆರೆಸ್ಸೆಸ್-ಜನಸಂಘದ ಖಂಡನಾರ್ಹ ಪಾತ್ರವನ್ನು ಕೇಂದ್ರಸಮಿತಿ ಕಾಳಜಿಯಿಂದ ಪರಿಶೀಲಿಸುತ್ತದೆ. ತನ್ನದೇ ಆದ ವರ್ಗ ಮತ್ತು ಸಾಮೂಹಿಕ ರಾಜಕೀಯ ತಳಹದಿಯನ್ನು ಬಲಪಡಿಸಿಕೊಳ್ಳುವುದರ ಜೊತೆಗೆ, ಎಡ ಪಕ್ಷಗಳು ಮತ್ತು ಗುಂಪುಗಳ ಐಕ್ಯತೆಗೆ ಎಡ ಮತ್ತು ಪ್ರಜಾಪ್ರಭುತ್ವವಾದಿ ಪಕ್ಷಗಳ ಐಕ್ಯತೆಗೆ ಎಲ್ಲ ಸರ್ವಾಧಿಕಾರ ವಿರೋಧಿ ಶಕ್ತಿಗಳ ಐಕ್ಯತೆಗೆ ದುಡಿಯಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಪ್ರತಿಜ್ಞೆ ಕೈಗೊಂಡಿದೆ.

ಮುಖ್ಯ ವಿಷಯಗಳು :

ಒಂಬತ್ತು ರಾಜ್ಯಗಳಲ್ಲಿ ನಡೆಯುವ ಚುನಾವಣೆಯೇ ಅತಿ ಮುಖ್ಯವಾದ ವಿಚಾರವಾಗಿದ್ದರೂ, ಚುನಾವಣೆಯಷ್ಟೇ ಮುಖ್ಯವಾದ ಇನ್ನಿತರ ವಿಷಯಗಳಿಗೂ ಒಗ್ಗಟ್ಟಿನ ಸಾಮೂಹಿಕ ಕಾರ್ಯಾಚರಣೆ ತುಂಬ ಅಗತ್ಯವಾಗಿದೆ. ಕಾಂಗ್ರೆಸ್ (ಐ) ಸರ್ಕಾರವು ಅಧಿಕಾರಕ್ಕೆ ಬಂದು ಎರಡು ತಿಂಗಳ ಮೇಲಾಗಿದ್ದರೂ, ಪ್ರಜೆಗಳನ್ನು ಕಾಡುತ್ತಿರುವ ಯಾವ ಸಮಸ್ಯೆಯನ್ನೂ ನಿವಾರಿಸುವುದರಲ್ಲಿ ವಿಫಲವಾಗಿದೆ. ಅಲ್ಲದೆ ಈ ಅವಧಿಯಲ್ಲಿ ಪರಿಸ್ಥಿತಿ ಇನ್ನೂ ಹದಗೆಟ್ಟಿದೆ. ಅಗತ್ಯ ವಸ್ತುಗಳ ಬೆಲೆ ಏರುತ್ತಲೇ ಇದೆ. ಸಕ್ಕರೆಯಂತೂ ಊಹಾತೀತ ಮಟ್ಟ ಮುಟ್ಟಿದೆ. ಡೀಸೆಲ್, ಸೀಮೆಎಣ್ಣೆ, ಸಿಮೆಂಟ್ ಇತ್ಯಾದಿಗಳು ಕಪ್ಪು ಪಾರುಕಟ್ಟೆಯಲ್ಲಿ ಬಿಟ್ಟರೆ ಬೇರೆಕಡೆ ಸಿಕ್ಕುತ್ತಿಲ್ಲ. ರೈಲ್ವೆ ಸಾರಿಗೆಯಂತೂ ತೀರ ಹದಗೆಟ್ಟಿದ್ದು, ಅಗತ್ಯವಸ್ತುಗಳ ಸಾಗಾಣಿಕೆಯಲ್ಲಿ ಅದರಲ್ಲೂ ಕಲ್ಲಿದ್ದಲಿನ ಸಾಗಾಣಿಕೆ ಅಸ್ತವ್ಯಸ್ತವಾಗಿ ವಿದ್ಯುತ್ ಉತ್ಪಾದನೆಗೆ ಧಕ್ಕೆ ಬಂದಿದೆ. ಕಾಂಗ್ರೆಸ್ಸಿನ ಮೂವತ್ತು ವರ್ಷಗಳ ಆಡಳಿತ, ಜನತಾ, ಲೋಕದಳ-ಕಾಂಗ್ರೆಸ್ಸಿನ ಮೂರು ವರ್ಷಗಳ ಆಡಳಿತಗಳಿಂದ ಎಲ್ಲ ಆರ್ಥಿಕ ಮತ್ತು ರಾಜಕೀಯ ಸಮಸ್ಯೆಗಳು ಎಷ್ಟು ಬಿಗಡಾಯಿಸಿವೆಯೆಂದರೆ ಜನತೆಯ ಪ್ರಗತಿಯಲ್ಲಿ ಆಸಕ್ತಿಯುಳ್ಳ ಎಡ ಮತ್ತು ಪ್ರಜಾಪ್ರಭುತ್ವವಾದಿ ರಾಜಕೀಯ ಪಕ್ಷಗಳು, ವರ್ಗ ಮತ್ತು ಸಾಮೂಹಿಕ ಸಂಘಟನೆಗಳು ಮತ್ತು ವ್ಯಕ್ತಿಗಳು ಒಟ್ಟಾಗಿ ಕೆಲಸಮಾಡಿದರೆ ಮಾತ್ರ ಜನತೆಯ ಸ್ವಲ್ಪ ತತ್‌ಕ್ಷಣದ ಪರಿಹಾರ ದೊರಕುತ್ತದೆ.

ಕಾಂಗ್ರೆಸ್ (ಐ) ನಾಯಕರು ಹೇಳುವ ಹಾಗೆ, ಜನತಾ-ಲೋಕದಳ ನಾಯಕರು ಮೂರು ವರ್ಷಗಳ ಕಾಲ ದೇಶದ ದುರಾಡಳಿತ ನಡೆಸಿದ್ದರಿಂದ ಮಾತ್ರ ದೇಶದ ಆರ್ಥಿಕತೆ ಕೆಟ್ಟಿಲ್ಲ. ಕಾಂಗ್ರೆಸ್ ಪಕ್ಷ ಮೂವತ್ತು ವರ್ಷಗಳ ಕಾಲ, ಮತ್ತು ಜನತಾ-ಲೋಕದಳ ಮೂರು ವರ್ಷ ಅನುಸರಿಸಿದ ವರ್ಗನೀತಿಗಳೇ ಈ ದುರವಸ್ಥೆಗೆ ಕಾರಣ. ಆಳುವ ವರ್ಗಗಳು ಅನುಸರಿಸಿದ ಬಂಡವಾಳಶಾಹಿ ಅಭಿವೃದ್ಧಿ ನೀತಿಗಳಿಂದ ಆರ್ಥಿಕತೆ ಇನ್ನಷ್ಟು ಬಿಕ್ಕಟ್ಟಿನತ್ತ ಹದಗೆಡುತ್ತದೆ ಎಂಬುದನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತಿತರ ಎಡ ಮತ್ತು ಪ್ರಜಾಪ್ರಭುತ್ವವಾದಿ ಪಕ್ಷಗಳು ಪದೇಪದೇ ಹೇಳಿವೆ. ಸಮಾಜವಾದಿ ಮಾದರಿಯ ಸಮಾಜ, ಬೃಹತ್ ಪಂಚವಾರ್ಷಿಕ ಯೋಜನೆಗಳು, ಗರೀಬಿ ಹಟಾವೊ, 20 ಅಂಶಗಳ ಕಾರ್ಯಕ್ರಮ, ಗಾಂಧಿವಾದಿ ಯೋಜನೆ ಇವೆಲ್ಲವು ಗುರಿಗಳನ್ನು ಮುಟ್ಟದೆ ಬಿಕ್ಕಟ್ಟನ್ನು ಹೆಚ್ಚಿಸಿರುವುದೇಕೆಂದರೆ, ಇವೆಲ್ಲವು ಭಾರತದ ಆಳುವ ವರ್ಗಗಳು ಮತ್ತು ವಿದೇಶಿ ಗುತ್ತೇದಾರಿಗಳು ಆರ್ಥಿಕತೆಯ ಮೇಲೆ ಇನ್ನಷ್ಟು ಬಲವಾದ ಹಿಡಿತವನ್ನು ಹೊಂದುವುದರ ತಳಹದಿಯ ಮೇಲೆ ರೂಪಿತವಾಗಿವೆ. ಈ ಎಲ್ಲ ಯೋಜನೆಗಳನ್ನು ತಲೆಕೆಳಗು ಮಾಡಿದರೆ ಮಾತ್ರ ದೇಶವನ್ನು ಬಿಕ್ಕಟ್ಟಿನಿಂದ ಪಾರು ಮಾಡಬಹುದು.

ಯೋಜನೆಯ ಪುನರ್ ನವೀಕರಣ:

ಈ ಎಲ್ಲ ವರ್ಗ ಯೋಜನೆಗಳನ್ನು ತಲೆಕೆಳಗು ಮಾಡಬೇಕೆಂದು ಎಡ ಮತ್ತು ಪ್ರಜಾಪ್ರಭುತ್ವ ಚಳುವಳಿಯು ಪದೇಪದೇ ಹೇಳಿತ್ತೆಂಬುದನ್ನು ಕೇಂದ್ರ ಸಮಿತಿ ನೆನಪಿಸುತ್ತದೆ. ವಿಚಾರವಾದಿ ಬುದ್ಧಿಜೀವಿಗಳಲ್ಲದೆ ದುಡಿಯುವ ಜನತೆಯ ಹೋರಾಡುವ ಸಂಘಟನೆಗಳು, ಎಡ ಮತ್ತು ಪ್ರಜಾಪ್ರಭುತ್ವವಾದಿ ಪಕ್ಷಗಳ ಜೊತೆ ಸೇರಿಕೊಂಡು ಯೋಜನಾ ಕ್ರಮವನ್ನು ಹೇಗೆ ಪುನರ್ ನವೀಕರಣ ಮಾಡಬಹುದೆಂಬುದನ್ನು ಆಲೋಚಿಸಬೇಕೆಂದು ಕೇಂದ್ರ ಸಮಿತಿ ಮನವಿ ಮಾಡುತ್ತದೆ. ಯೋಜನಾ ಸಂಘಟನೆಗಳನ್ನು ತಮ್ಮ ರಾಜ್ಯಗಳಲ್ಲಿ ಉಳ್ಳ ಪ. ಬಂಗಾಳ, ತ್ರಿಪುರಾ ಮತ್ತು ಕೇರಳಗಳ ಸರ್ಕಾರಗಳು ಈ ದಿಶೆಯಲ್ಲಿ ಪ್ರಮುಖ ಪಾತ್ರ ವಹಿಸಬಹುದು.

ಅಸ್ಸಾಂ ಆಂದೋಳನ :

ದೇಶದಲ್ಲಿನ ರಾಜಕೀಯ ಪರಿಸ್ಥಿತಿ ಕೂಡಾ ಎಷ್ಟು ಗಂಭೀರವಾಗಿದೆಯೆಂದರೆ, "ಬಲಿಷ್ಠ ಕೇಂದ್ರ ಸರಕಾರದ ಬಗ್ಗೆ ಮಾತನಾಡುವ ಕಾಂಗ್ರೆಸ್ (ಐ) ನಾಯಕರಿಗೆ ಕೂಡಾ ಅಸ್ಸಾಂ ಮೇಘಾಲಯ ಮುಂತಾದ ಈಶಾನ್ಯ ಪ್ರದೇಶಗಳ ಸಮಸ್ಯೆಯನ್ನು ಬಗೆಹರಿಸುವುದು ಸಾಧ್ಯವಾಗಿಲ್ಲ. ಈಶಾನ್ಯ ವಲಯದ ಅನೇಕ ಪ್ರಜಾಗುಂಪುಗಳು ಎತ್ತಿ ಹೇಳಿರುವ ನೋವುಗಳು ನೈಜವಾಗಿದ್ದರೂ, ಕೇಂದ್ರ ಸರ್ಕಾರ ಈ ಸಮಸ್ಯೆಯನ್ನು ಪರಿಹರಿಸುವುದರಲ್ಲಿ ಸೋತಿರುವುದರಿಂದ, ಭಾರತದ ಐಕ್ಯತೆ ಮತ್ತು ಒಗ್ಗಟ್ಟುಗಳ ಕಲ್ಪನೆಗೆ ಮತ್ತು ಭಾರತೀಯ ಪೌರತ್ವಕ್ಕೇ ಸವಾಲಾಗಿರುವ ಚಳುವಳಿಯೊಂದು ಈಗ ಆರಂಭವಾಗಿದೆ.

ಎಲ್ಲ ರಾಷ್ಟ್ರೀಯ ರಾಜಕೀಯ ಪಕ್ಷಗಳು ಮತ್ತು ಅಸ್ಸಾಂ ವಿಧಾನಸಭೆಯಲ್ಲಿ ಪ್ರತಿನಿಧಿತವಾದ ಪಕ್ಷಗಳು, ಅಸ್ಸಾಂನಲ್ಲಿನ ಪ್ರಸ್ತುತ ದಂಗೆಯನ್ನು ನಿಲ್ಲಿಸುವಂತೆ ಮಾಡಿರುವ ಮನವಿಯನ್ನು ಪುರಸ್ಕರಿಸುತ್ತಾ, ವಿದೇಶಿ ರಾಷ್ಟ್ರೀಯರನ್ನು ನಿರ್ಧರಿಸಲು 1 71 ಅನ್ನು ಕೊನೆ ದಿನಾಂಕವನ್ನಾಗಿ ಪರಿಗಣಿಸಬೇಕೆಂದು ಕೇಂದ್ರಸಮಿತಿ ಕೋರುತ್ತದೆ. ವಿದೇಶಿ ರಾಷ್ಟ್ರೀಯರನ್ನು ಗುರುತಿಸುವುದರಲ್ಲಿ ಸಹಾಯ ಮಾಡುವುದಲ್ಲದೆ ಎಲ್ಲ ಬಗೆಯ ಸಹಾಯಗಳನ್ನೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ನೀಡುವುದಲ್ಲದೆ ಅನೇಕ ಕಾರಣಗಳಿಗಾಗಿ ಅಸ್ಸಾಂನಲ್ಲಿ ಜೀವಿಸಿ ಕೆಲಸ ಮಾಡುತ್ತಿರುವ ಭಾರತೀಯ ಪೌರರನ್ನು ರಕ್ಷಿಸುತ್ತದೆ ಎಂದೂ ಭರವಸೆ ಕೊಡುತ್ತದೆ.

ಅಸ್ಸಾಂ ಜನತೆಯಲ್ಲದೆ ನೆರೆ ರಾಜ್ಯಗಳ ಜನತೆಯೂ ಕಷ್ಟಕ್ಕೀಡಾಗುವಂತೆ ಮಾಡಿರುವ ಪ್ರಸ್ತುತ ದಂಗೆಯನ್ನು ನಿಲ್ಲಿಸುವಂತೆ ಕೋರುತ್ತಾ, ಎಲ್ಲ ರಾಜಕೀಯ ಪಕ್ಷಗಳ ಕರೆಯನ್ನು ಮನ್ನಿಸುವಂತೆ ಚಳುವಳಿಯ ನಾಯಕರಿಗೆ ಕೇಂದ್ರಸಮಿತಿ ಮನವಿಮಾಡುತ್ತದೆ.

ಪ್ರತ್ಯೇಕ ಸಮಸ್ಯೆಗಳು :

ಈಶಾನ್ಯ ದಿಕ್ಕಿನ ವಿವಿಧ ಪ್ರಜಾ ಗುಂಪುಗಳಿಗೆ ತಮ್ಮದೆ ಆದ ಸಮಸ್ಯೆಗಳು ಇವೆ. ಕೇಂದ್ರ ಸರ್ಕಾರವು ಈ ಗುಂಪುಗಳನ್ನು ತಮ್ಮದೇ ಸ್ವಂತ ಅಸ್ತಿತ್ವ ಮತ್ತು ಭಾರತದ ಒಕ್ಕೂಟದಲ್ಲಿ ತಮ್ಮ ರಾಜ್ಯಗಳಿಗೆ ಗರಿಷ್ಠ ಸ್ವಾಯತ್ತತೆಯನ್ನು ಬಯಸುವ ಬೆಳೆಯುತ್ತಿರುವ ಪೌರ ಗುಂಪುಗಳೆಂದು ಪರಿಗಣಿಸದಿದ್ದರೆ ಈ ಸಮಸ್ಯೆಗಳನ್ನು ಪರಿಹರಿಸುವುದು ಸಾಧ್ಯವಿಲ್ಲವೆಂದು ಕೇಂದ್ರ ಸಮಿತಿ ಅಭಿಪ್ರಾಯಪಡುತ್ತದೆ. ಆದರೆ ಕಾಂಗ್ರೆಸ್ (ಐ) ಮಾತ್ರವಲ್ಲದೆ ದುರಾದೃಷ್ಟದಿಂದ ಇತರ ಪಕ್ಷಗಳೂ ಬಯಸುವ "ಬಲಿಷ್ಠ ಭಾರತದ ಐಕ್ಯ ಸಾಮ್ರಾಜ್ಯ"ದ ಕಲ್ಪನೆಯ ಜೊತೆ ಇದು ಸರಿಹೊಂದುವುದಿಲ್ಲ. "ಬಲಿಷ್ಠ ಭಾರತೀಯ ಐಕ್ಯ ಒಕ್ಕೂಟ"ವನ್ನು ಬೆಂಬಲಿಸುತ್ತೇವೆಂದು ಹೇಳುವ ಆರೆಸ್ಸೆಸ್-ಜನಸಂಘ ನಾಯಕತ್ವವು ಅಸ್ಸಾಂ ಆಂದೋಲನದ ಕೆಲವು ಅಂಗಗಳು ಬೇಡಿದ ಅಂಥ ಬೇಡಿಕೆಗಳಿಗೆ ಬೆಂಬಲ ನೀಡುತ್ತಿದೆ. ಇಂಥ ಸಮಸ್ಯೆಗಳಿಗೆ ಪರಿಹಾರವನ್ನು ಬಯಸುವವರೆಲ್ಲರೂ ಇದುವರೆಗೆ ಅದು ಅನುಸರಿಸಿರುವ ನೀತಿಯ ಫಲಿತಾಂಶದ ಬಗ್ಗೆ ಆಲೋಚಿಸಬೇಕೆಂದು ಕೇಂದ್ರ ಸಮಿತಿ ಮನವಿ ಮಾಡುತ್ತದೆ.

ಪ್ರತಿಗಾಮಿ ಶಕ್ತಿಗಳು ಎತ್ತಿರುವ ಮತ್ತು ಸಾಮ್ರಾಜ್ಯಶಾಹಿ ಏಜನ್ಸಿಗಳು ಬೆಂಬಲಿಸಿರುವ ಪ್ರತ್ಯೇಕತೆ ಮತ್ತು ಸ್ವಾತಂತ್ರ್ಯದ ಘೋಷಣೆಗಳಿಗೆ ಬಲಿಯಾಗಬಾರದೆಂದು ಈ ಪ್ರಜಾಗುಂಪುಗಳಿಗೆ ಕೇಂದ್ರಸಮಿತಿ ಮನವಿ ಮಾಡುತ್ತದೆ. ಆಳುವವರ್ಗಗಳು ಮತ್ತು ಅವರ ನ್ಯಾಯಬದ್ಧ ಆಸೆಗಳನ್ನು ಹತ್ತಿಕ್ಕುವವರ ವಿರುದ್ಧ ನಡೆಯುವ ಹೋರಾಟದಲ್ಲಿ, ದೇಶದ ಪ್ರಜಾಪ್ರಭುತ್ವವಾದಿ ಚಳುವಳಿಯ ಮುಖ್ಯ ಪ್ರವಾಹದೊಡನೆ ಸೇರಿದಾಗ ಮಾತ್ರ ಈ ಸಮಸ್ಯೆಗಳನ್ನು ಬಗೆಹರಿಸಬಹುದು.

[ಮುಂದುವರಿಯುವುದು]

ಐ.ಎನ್.ಟಿ.ಯು.ಸಿ.ಯಿಂದ ಸಿ.ಐ.ಟಿ.ಯು.ಗೆ

ಬೆಂಗಳೂರು ನಗರದಲ್ಲಿ ಮೈಸೂರು ರೋಡಿನಲ್ಲಿರುವ ಕ್ವಾಲಿಟಿ ಫುಡ್ ಪ್ರಾಡಕ್ಟ್‌ನಲ್ಲಿ ಸುಮಾರು 500 ಜನ ಕಾರ್ಮಿಕರಲ್ಲಿ ಕೇವಲ 200 ಜನ ಕಾರ್ಮಿಕರನ್ನು ಮಾತ್ರ ಖಾಯಂ, ಬಾಕೀ ಕಾರ್ಮಿಕರಿಗೆ ಯಾವ ಸೌಲಭ್ಯಗಳೂ ಇಲ್ಲ. ಕಾರ್ಮಿಕರು ಐ.ಎನ್.ಟಿ.ಯು.ಸಿ. ಮುಖಂಡರ ಮೇಲೆ ವಿಶ್ವಾಸವನ್ನು ಕಳೆದುಕೊಂಡು ತಾ. 16-3-80ರಂದು ವಿಶೇಷ ಸರ್ವಸದಸ್ಯರ ಸಭೆಯಲ್ಲಿ ಈ ಕೆಳಕಂಡ ಸಿ. ಐ. ಟಿ. ಯು. ಮುಖಂಡರನ್ನು ಆಯ್ಕೆ ಮಾಡಿದ್ದಾರೆ.

ಅಧ್ಯಕ್ಷರಾಗಿ : ಕಾಂ. ಎಸ್. ಸೂರ್ಯನಾರಾಯಣರಾವ್ ಸಿ.ಐ.ಟಿ.ಯು., ಒಂದನೇ ಉಪ ಅಧ್ಯಕ್ಷರಾಗಿ : ಕಾಂ. ಟಿ ಎಸ್. ಅನಂತರಾವ್ ಸಿ. ಐ. ಟಿ. ಯು., ಎರಡನೇ ಉಪ ಅಧ್ಯಕ್ಷರಾಗಿ: ಕಾಂ. ಬೀರಣ್ಣ. ಪ್ರಧಾನ ಕಾರ್ಯದರ್ಶಿಯಾಗಿ : ಕಾಂ. ಆರ್. ಶ್ರೀನಿವಾಸ ಸಿ. ಐ. ಟಿ. ಯು., ಕಾರ್ಯದರ್ಶಿಯಾಗಿ : ಕಾಂ. ಟಿ. ಚಂದ್ರಶೇಖರ್, ಜಂಟಿ ಕಾರ್ಯದರ್ಶಿಯಾಗಿ: ಕಾಂ. ಎನ್. ನಾಗರಾಜ್, ಖಜಾಂಚಿಯಾಗಿ : ಕಾಂ. ಯೋಗಾನಂದ.

ಕಾರ್ಯಸಮಿತಿ ಸದಸ್ಯರುಗಳು ಒಬ್ಬ ಮಹಿಳೆಯು ಸೇರಿದಂತೆ ಒಟ್ಟು 15 ಸದಸ್ಯರುಗಳು ಆಯ್ಕೆಮಾಡಲಾಯಿತು.

ಕಾಂ. ಎಸ್. ಸೂರ್ಯನಾರಾಯಣರಾವ್‌ರವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಕಾರ್ಮಿಕರು ರಾಜಕೀಯವಾಗಿ ತರಬೇತಿಯಾಗುವುದು ಅಗತ್ಯತೆಯನ್ನು ಒತ್ತಿ ಹೇಳಿದರು.

ಕಾಂ. ಟಿ. ಎಸ್. ಅನಂತರಾವ್‌ರವರು ಮಾತನಾಡುತ್ತಾ ರಾಷ್ಟ್ರೀಯವಾಗಿ ಮತ್ತು ಅಂತರ ರಾಷ್ಟ್ರೀಯವಾಗಿ ಕಾರ್ಮಿಕರ ಚಳುವಳಿಯನ್ನು ವಿವರಿಸಿದರು.

ಕಾಂ. ಆರ್. ಶ್ರೀನಿವಾಸ್‌ರವರು ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡುತ್ತಾ ಕಾರ್ಮಿಕರು ಶಿಸ್ತನ್ನು ಕಲಿತು ಹೋರಾಟಗಳನ್ನು ಮಾಡಿದರೆ ಉತ್ತಮವೆಂದು ತಿಳಿಸಿ, ಸಿ. ಐ. ಟಿ. ಯು. ನ. ಧ್ಯೇಯ-ಧೋರಣೆಗಳನ್ನು ವಿವರಿಸಿದರು.

ಕಾರ್ಯದರ್ಶಿ ಕಾಂ. ಟಿ. ಚಂದ್ರಶೇಖರ್‌ರವರ ವಂದನೆಯೊಡನೆ ಸಭೆಯು ಮುಕ್ತಾಯವಾಯಿತು.

o

ಸಂಪಾದಕೀಯ

(ಒಂದನೇ ಪುಟದಿಂದ)

ಇತರ ರಾಜ್ಯಗಳಲ್ಲಿ ಹೊಸಹೊಸ ಪತ್ರಿಕೆಗಳು ಪ್ರಕಟವಾಗುತ್ತಿರುವಾಗ ನಮ್ಮ ರಾಜ್ಯದಲ್ಲಿ ಇದ್ದ ಪತ್ರಿಕೆಯೂ ಮುಚ್ಚಲ್ಪಡುತ್ತಿರುವುದು ಶೋಚನೀಯವಾಗಿದೆ. ಸರಕಾರ ಕೂಡಲೇ ಮಧ್ಯ ಪ್ರವೇಶಮಾಡಿ ಪತ್ರಿಕೆಯು ಪುನರಾರಂಭವಾಗುವಂತೆ ಕೂಡಲೇ ಸೂಕ್ತಕ್ರಮ ತೆಗೆದುಕೊಳ್ಳಬೇಕೆಂದು ನಾವು ಒತ್ತಾಯಿಸುತ್ತೇವೆ. ರಾಜ್ಯದ ಕಾರ್ಮಿಕರೂ ಮತ್ತು ನಾಗರಿಕರೂ ಹೊಟ್ಟೆಗಿಲ್ಲದೆ ನರಳುತ್ತಿರುವ ಪತ್ರಿಕಾ ನೌಕರರಿಗೆ ಸಹಾಯ ನೀಡಬೇಕೆಂದೂ ವಿನಂತಿಸುತ್ತೇವೆ.

o

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist), Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053.